TESS India

# Leading partnerships: engaging with parents and the wider school community

## ಸಹಭಾಗಿತ್ವಗಳ ನಾಯಕತ್ವ: ಪೋಷಕರೊಂದಿಗೆ ಹಾಗೂ ವಿಶಾಲ ಶಾಲಾ ಸಮುದಾಯದೊಂದಿಗೆ ತೊಡಗಿಸಿಕೊಳ್ಳುವುದು





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ (Open Educational Resource-OER)** ಶಾಲೆಯಲ್ಲಿ ಭೋದನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್–ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು (National School leadership Curriculum Framework-India)** ಗುರುತಿಸಿರುವ ಶಾಲಾ ನಾಯಕತ್ವದ ಯಥಾರ್ಥನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಭೋದನೆ–ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)– ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಭೋದನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್–ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಭೋದನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಪೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್–ಇಂಡಿಯಾ (Teacher Education through School based Support) ಯೋಜನೆಯ ಬಗ್ಗೆ**

ವಿದ್ಯಾರ್ಥಿ–ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್–ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್–ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವೆರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್–ಇಂಡಿಯಾ** ರೂಪುಗೊಂಡಿದೆ.

*Version 2.0 SL19v1*
*Karnataka*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

# ಘಟಕದ ಕುರಿತು

*ಶಾಲೆಯ ನಾಯಕತ್ವ ವಹಿಸುವುದು ಒಂದು ಮಹತ್ತರವಾದ ಹಾಗೂ ಜವಾಬ್ದಾರಿಯುತ ಕರ್ತವ್ಯ, ಹಾಗೂ ಕೆಲವೊಮ್ಮೆ ಇದು ಧೃತಿಗೆಡಿಸುವಂತದೂ ಆಗಿರುತ್ತದೆ. ಇಲ್ಲಿ ಹಲವಾರು ಗಮನಾರ್ಹ ಸವಾಲುಗಳೂ ಇವೆ, ನೀವು ಮಾಡುವ ಪ್ರತೀ ಕಾರ್ಯವೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಕ್ಕಳ, ಶಾಲಾ ಸಿಬ್ಬಂದಿಯ ಹಾಗೂ ವಿಸ್ತೃತವಾಗಿ ಸಮುದಾಯದವರ ಮೇಲೂ ಪ್ರಭಾವ ಬೀರುತ್ತದೆ. ವಿವಿಧ ಭಾಗೀದಾರರೊಂದಿಗೆ ಉತ್ತಮ ಬಾಂಧವ್ಯ ಬೆಳೆಸುವುದರ ಪ್ರಾಮುಖ್ಯತೆಯನ್ನು ಗುರುತಿಸಿದಂಥಹ ಶಾಲಾ ನಾಯಕರು ಹಲವು ಬಗೆಯ ಪ್ರಯೋಜನಗಳನ್ನು ಪಡೆಯುತ್ತಾರೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) ರಲ್ಲಿ ವಿವಿಧ ಶಾಲೆಗಳು ಮತ್ತು ಸಂಸ್ಥೆಗಳೊಂದಿಗೆ ಸಹಯೋಗ ಹೊಂದುವುದರಿಂದಾಗುವ ಹಲವು ಪ್ರಯೋಜನಗಳನ್ನು, ಶಾಲಾ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಪ್ರಮುಖ ಎಂದು ಪರಿಗಣಿಸಲಾಗಿದೆ, ಚಟುವಟಿಕೆ ಆಧಾರಿತ ಭಾಗವಹಿಸುವಿಕೆಯ ಕಲಿಕೆ ಮತ್ತು ಒಳಗೊಳಿಸುವಿಕೆಯನ್ನು ಉತ್ತೇಜಿಸಲು ವಸ್ತು ಮತ್ತು ಮಾನವ ಸಂಪನ್ಮೂಲಗಳನ್ನು ಎಟುಕುವಲ್ಲಿ ಸಹಯೋಗವು ಒಂದು ಉತ್ತಮ ಮಾರ್ಗ ಎಂಬುದಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.*

*ಆದುದರಿಂದ, ಪೂರ್ವ ಪ್ರಾಥಮಿಕ ಮತ್ತು ಪ್ರೌಢಶಾಲಾ ನಾಯಕರು ವಿಸ್ತೃತ ಸಮುದಾಯದೊಂದಿಗೆ ಪಾಲುದಾರಿಕೆ ಹೊಂದಲು ಸದೃಢ ಹಾಗೂ ಸಹಯೋಗದ ಬಾಂಧವ್ಯಗಳನ್ನು ನಿರ್ಮಿಸಲು ಮಾರ್ಗಗಳನ್ನು ಹುಡುಕುವ ಅಗತ್ಯವಿದೆ. ಪ್ರಮುಖ ರಾಜ್ಯ ಮಟ್ಟದ ಸಂಸ್ಥೆಗಳು, ಶಾಲಾ ನಿರ್ವಹಣಾ ಸಮಿತಿಗಳು, ಸ್ವಯಂಸೇವಾ ಸಂಸ್ಥೆಗಳು, ಇತರೆ ಶಾಲೆಗಳು, ನಿರ್ದಿಷ್ಟವಾಗಿ ಶಾಲೆಯಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ತಂದೆತಾಯಿಯರು ಹಾಗೂ ಪೋಷಕರು ಇದರಲ್ಲಿ ಒಳಗೊಂಡಿದ್ದಾರೆ.*

*ಸಮುದಾಯದ ಅಭಿವೃದ್ಧಿಗೆ ಶಾಲೆಯ ಒಂದು ಮಹತ್ತರವಾದ ಕೊಡುಗೆದಾರ ಆಗಿರುತ್ತದೆ, ಆದ್ದರಿಂದ ಶಾಲಾ ನಾಯಕರು, ತಾವು ಸೇವೆ ಒದಗಿಸುವುದನ್ನು ಅರಿಯುವುದು ಮಾತ್ರವಲ್ಲದೇ, ಸಮುದಾದಯ ಅಗತ್ಯತೆಗಳು, ನಿರೀಕ್ಷೆಗಳು ಮತ್ತು ಆಶಯಗಳನ್ನೂ ಸಹ ಅರಿತಿರಬೇಕು. ಒಬ್ಬ ಶಾಲಾ ನಾಯಕನಾಗಿ ನೀವೊಬ್ಬರೇ ಜವಾಬ್ದಾರಿ ಹೊರಬೇಕೆಂದಿಲ್ಲ, ನಿಮಗೆ ಎಸ್.ಎಂ.ಸಿ.ಯ ಬೆಂಬಲವೂ ಇರುತ್ತದೆ. ಇದನ್ನು ಸಾಧಿಸಲು, ಎಲ್ಲಾ ಭಾಗೀದಾರರಿಗೆ ವಿಶೇಷವಾಗಿ ತಂದೆ ತಾಯಂದಿರಿಗೆ, ಶಾಲೆಯ ಸಂಸ್ಕೃತಿ ಹಾಗೂ ನಿರೀಕ್ಷೆಗಳ ಬಗ್ಗೆ ತಿಳಿಸಲು ಅವರನ್ನು ಶಾಲೆಗೆ ಆಹ್ವಾನಿಸಿ, ಅವರ ಮಕ್ಕಳ ಶಿಕ್ಷಣದಲ್ಲಿ ಪಾಲುಗೊಳ್ಳಲು ಅವರೂ ಸಹ ಮುಖ್ಯ ಭಾಗೀದಾರರೆಂದು ಅವರಿಗೆ ಮನವರಿಕೆ ಮಾಡಿಸಬೇಕು.*

*ವಿವಿಧ ಭಾಗೀದಾರರೊಂದಿಗೆ ತೊಡಗಿಕೊಳ್ಳಲು ಮತ್ತು ಸಹಯೋಗ ಹೊಂದಲು ಪೂರ್ವಭಾವಿಯಾಗಿ ಕಾರ್ಯೋನ್ಮುಖರಾಗಲು ನಿಮಗೆ ಸಹಾಯ ಮಾಡುವುದು ಈ ಘಟಕದ ಉದ್ದೇಶವಾಗಿದೆ. ಇದರಿಂದ ಶಾಲಾ ನಾಯಕರು ತಮ್ಮ ಶಾಲೆಯ ಕನಸನ್ನು ನನಸು ಮಾಡುವಲ್ಲಿ ಭಾಗೀದಾರರ ಸಹಾಯ, ಬೆಂಬಲ ಹಾಗೂ ಪ್ರೋತ್ಸಾಹವನ್ನು ಅವಲಂಭಿಸಬಹುದಾಗಿದೆ.*

## ಕಲಿಕಾ ದಿನಚರಿ (ಲರ್ನಿಂಗ್ ಡೈರಿ)

*ಈ ಘಟಕದ ಮೇಲೆ ಕಾರ್ಯ ನಿರ್ವಹಿಸುವಾಗ ನಿಮ್ಮ ಕಲಿಕಾ ದಿನಚರಿಯಲ್ಲಿ ಅಥವಾ ಪುಸ್ತಕದಲ್ಲಿ, ಅಥವಾ ಒಂದು ಫೋಲ್ಡರ್‌ನಲ್ಲಿ ನೀವು ಆಲೋಚನೆಗಳು ಮತ್ತು ಯೋಜನೆಗಳ ಕುರಿತು ವಿಚಾರಗಳನ್ನು ದಾಖಲಿಸಿಕೊಳ್ಳುವುದು. ಒಂದು ವೇಳೆ ನೀವು ಈಗಾಗಲೇ ಇದನ್ನು ಪ್ರಾರಂಭಿಸಿರಬಹುದು. ಈ ಘಟಕದ ಮೂಲಕ ನೀವು ಒಬ್ಬರೇ ಕಾರ್ಯ ನಿರ್ವಹಿಸುತ್ತಿರಬಹುದು, ಆದರೆ ನೀವು ನಿಮ್ಮ ಕಲಿಕೆಗಳನ್ನು ಮತ್ತೊಬ್ಬ ಶಾಲಾ ನಾಯಕರೊಂದಿಗೆ ಚರ್ಚಿಸಲು ಸಾಧ್ಯವಾದಲ್ಲಿ ನಿಮಗೆ ಇನ್ನೂ ಹೆಚ್ಚಿನ ಕಲಿಕೆ ಉಂಟಾಗುತ್ತದೆ. ಇವರು ಈಗಾಗಲೇ ನಿಮ್ಮೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಸಹೋದ್ಯೋಗಿಯೂ ಆಗಿರಬಹುದು, ಅಥವಾ ನೀವು ಬಾಂದವ್ಯಹೊಂದಬಹುದಾದ ಹೊಸ ವ್ಯಕ್ತಿಯೂ ಆಗಿರಬಹುದು. ಇದು ಒಂದು ವ್ಯವಸ್ಥಿತ ರೀತಿಯಲ್ಲಿಯೂ ಆಗಬಹುದು ಅಥವಾ ಅನೌಪಚಾರಿಕತೆಯ ಆಧಾರದಲ್ಲೂ ಆಗಬಹುದು. ನಿಮ್ಮ ಕಲಿಕಾ ದಿನಚರಿಯಲ್ಲಿ ದಾಖಲಿಸುವ ವಿಚಾರಗಳು ಇಂಥಹ ಸಭೆಗಳಿಗೆ ಪ್ರಯೋಜನಕಾರಿ ಆಗಬಹುದು ಅಥವಾ, ನಿಮ್ಮ ಧೀರ್ಘಕಾಲಿಕ ಕಲಿಕೆ ಮತ್ತು ಬೆಳವಣಿಗೆಯ ನಕ್ಷೀಕರಣಕ್ಕೆ ಸಹಾಕಾರಿಯಾಗಬಹುದು.*

# ಶಾಲಾ ನಾಯಕರು ಈ ಘಟಕದ ಕುರಿತು ಏನನ್ನು ಕಲಿಯುತ್ತಾರೆ

- *ನಿಮ್ಮ ರಾಜ್ಯದ ಪ್ರಮುಖ ಸಂಸ್ಥೆಗಳ ಜೊತೆಗೆ ಪರಿಣಾಮಕಾರಿ ಸಂಬಂಧಗಳನ್ನು ಹುಟ್ಟುಹಾಕುವುದರ ಕುರಿತು*
- *ಇತರೆ ಶಾಲೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಜೊತೆಗೆ ಸಹಯೋಗದ ಪಾಲುದಾರಿಕೆಯನ್ನು ನಿರ್ಮಿಸಲು*
- *ಸಮುದಾಯಾಧಾರಿತ ಸಂಸ್ಥೆಗಳು, ವಿಶೇಷವಾಗಿ ಎಸ್.ಎಂ.ಸಿ.ಗಳ ಜೊತೆ ತೊಡಗಿಕೊಳ್ಳಲು*
- *ವಿದ್ಯಾರ್ಥಿಗಳ ಕಲಿಕೆಯನ್ನು ಅಭಿವೃದ್ಧಿ ಪಡಿಸಲು ತಂದೆ ತಾಯಿಯರ ಜೊತೆಗೂಡಿ ಕಾರ್ಯ ನಿರ್ವಹಿಸಲು.*

# 1 ನಿಮ್ಮ ರಾಜ್ಯದ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸಿವುದು

*ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸುವುದರೊಂದಿಗೆ ರಾಜ್ಯದ ವಿವಿಧ ಜಿಲ್ಲೆಗಳ ಮತ್ತು ತಾಲ್ಲೂಕು ಮಟ್ಟದ ಸಂಸ್ಥೆಗಳ ಪಾತ್ರವನ್ನು ಸ್ಪಷ್ಟವಾಗಿ ಅಭಿವ್ಯಕ್ತಿಪಡಿಸಲು, ರಾ.ಪ.ಚೌ 2005 ಹಾಗೂ ಶಿಕ್ಷಣದ ಹಕ್ಕು ಕಾಯಿದೆ 2009 ಭಾರತದ ಶಾಲಾ ಶಿಕ್ಷಣದ ಹಿನ್ನೆಲೆಯನ್ನು ಬದಲಾಯಿಸಿದೆ. ಶಿಕ್ಷಣದ ಹಕ್ಕು ಕಾಯಿದೆ 2009, ಶಾಲಾ ಹಂತದಲ್ಲಿ ಎಸ್.ಎಂ.ಸಿ.ಗಳ ಪಾತ್ರ ಮತ್ತು ಜವಾಬ್ದಾರಿಯನ್ನು ಸ್ಪಷ್ಟವಾಗಿ ತಿಳಿಯಪಡಿಸಿದೆ. ಇದರಲ್ಲಿ ಹಲವು ಹಂತಗಳ ಜವಾಬ್ದಾರಿಗಳಿದ್ದರೂ ಸಹ ಶಾಲೆಗಳು ಈ ಕೆಳಕಂಡ ಅಂಶಗಳನ್ನು ಹೊಂದಿರಲೇಬೇಕೆಂದು ರಾಜ್ಯವು ಕಡ್ಡಾಯ ಪಡಿಸಿದೆ:*

- *ವಿದ್ಯಾರ್ಥಿಗಳು ಸುರಕ್ಷಿತವಾಗಿ ಶಾಲೆ ತಲುಪಲು ಅಗತ್ಯವಿದ್ದಲ್ಲಿ ಸಾರಿಗೆಯೊಂದಿಗೆ ವ್ಯವಸ್ಥೆ.*
- *ಸೂಚಿಸಲಾದಂಥಹ ವಿದ್ಯಾರ್ಥಿ–ಶಿಕ್ಷಕ ಅನುಪಾತ.*
- *ಉಪಯೋಗಿಸಲು ಯೋಗ್ಯವಾದ ಹಾಗೂ ಪ್ರತ್ಯೇಕ ಶೌಚಾಲಯಗಳು ಹಾಗೂ ಸಾಕಷ್ಟು ತರಗತಿ ಕೋಣೆಗಳನ್ನು ಒಳಗೊಂಡಂಥಹ ಎಲ್ಲಾ ವಾತವರಣಕ್ಕೂ ಅನುಕೂಲವಾದ ಶಾಲಾ ಕಟ್ಟಡ.*
- *ಅಗತ್ಯಕ್ಕನುಸಾರವಾದ ಹಾಗೂ ಸುರಕ್ಷಿತವಾದ ಕುಡಿಯುವ ನೀರು*
- *ಕಾಂಪೌಂಡ್ ಆವರಣದೊಳಗೆ ಆಟೋಪಕರಣನ್ನೊಳಗೊಂಡ ಆಟದ ಮೈದಾನ ಮತ್ತು ಅಡುಗೆ ಕೋಣೆ.*
- *ಒಂದು ಗ್ರಂಥಾಲಯ.*
- *ಎಲ್ಲಾ ಮಕ್ಕಳನ್ನೂ ಸಮಾನವಾಗಿ ಕಾಣುಲು ತರಬೇತಿ ಹೊಂದಿದ ಶಿಕ್ಷಕರು.*
- *ತಡವಾಗಿ ದಾಖಲಾದ ಮಕ್ಕಳಿಗೆ ವಿಶೇಷ ತರಬೇತಿ.*
- *ಎಲ್ಲಾ ಬೋಧನಾ ಕಲಿಕಾ ಸಮಾಗ್ರಿಗಳಾದ ಪಠ್ಯ ಪುಸ್ತಕಗಳು, ವರ್ಕ್ ಬುಕ್ಕುಗಳು, ಸ್ಟೇಷನರಿಗಳು, ಸಮವಸ್ತ್ರಗಳು ಹಾಗೂ ಬಿಸಿ ಊಟದ ಸೌಲಭ್ಯ.*

*ಈ ಜವಾಬ್ದಾರಿಗಳನ್ನು ಕಂಡುಕೊಳ್ಳಲು ರಾಜ್ಯದಲ್ಲಿ ವಿವಿಧ ಪ್ರಯತ್ನಗಳು ಹಾಗೂ ಯೋಜನಗೆಗಳ ಲಭ್ಯತೆ ಇದೆ. ಉದಾ: ಪೂರ್ವಪ್ರಾಥಮಿಕ ಶಾಲೆಯ ಸುತ್ತ ಆವರಣದ ಬೇಲಿ, 50 ಸಾವಿರ ಶಿಕ್ಷಕರ ಹುದ್ದೇಗಳನ್ನು ತುಂಬಲು ನೇಮಕಾತಿ ಪ್ರಕ್ರಿಯೆ, ಕಲಿಕಾ ನ್ಯೂನತೆಯುಳ್ಳ ಮಕ್ಕಳಿಗಾಗಿ ವಿಶೇಷ ಸೇವೆಗಳನ್ನೊಳಗೊಂಡ ಸಂಚಾರಿ ವಾಹನಗಳು ಅಥವಾ, ರಾಜ್ಯಾದ್ಯಂತ ತಾಂತ್ರಿಕ ಮೂಲಭೂತ ಸೌಕರ್ಯಗಳ ವ್ಯವಸ್ಥೆಯ ನಿರ್ಮಾಣ ಇತ್ಯಾದಿಗಳನ್ನು ಒಳಗೊಂಡಂಥಹ 3 ವರ್ಷಗಳ ಕಾರ್ಯಕ್ರಮ.*



**ಚಿತ್ರ 1:** ಶಾಲಾ ನಾಯಕರಾಗಿ ನೀವು ರಾಜ್ಯದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅರಿತಿದ್ದರೆ ನಿಮ್ಮ ಶಾಲೆಗೆ ಮತ್ತು ವಿದ್ಯಾರ್ಥಿಗಳಿಗೆ ಅವುಗಳ ಅನುಕೂಲತೆಯನ್ನು ಪಡೆಯುವಂತೆ ಯೋಜನೆ ಕೈಗೊಳ್ಳಬಹುದು.

### ಚಟುವಟಿಕೆ 1: ಯಾವ ಕ್ಷೇತ್ರಗಳಲ್ಲಿ ರಾಜ್ಯ ಮಟ್ಟದ ಸಂಸ್ಥೆಗಳ ಸಹಾಯ ಪಡೆಯಬಹುದೆಂದು ಗುರುತಿಸುವಿಕೆ

*ಮೇಲ್ಕಂಡ ಪಟ್ಟಿಯಲ್ಲಿ ಗಮನಿಸಿದಂತೆ, ನಿಮ್ಮ ಶಾಲೆಯಲ್ಲಿ ಯಾವ ಕ್ಷೇತ್ರಗಳಲ್ಲಿ ಜಿಲ್ಲೆ, ತಾಲ್ಲೂಕು ಮತ್ತು ವಲಯ ಹಂತಗಳನ್ನೊಳಗೊಂಡಂತೆ, ರಾಜ್ಯ ಮಟ್ಟದ ಪ್ರಮುಖ ಸಂಸ್ಥೆಗಳು ಸೇವೆಸಲ್ಲಿಸಹುದೆಂದು ಗುರುತಿಸುವುದು. ಉದಾ: ನಿಮ್ಮ ಶಾಲೆಯಲ್ಲಿ ಶಿಕ್ಷಕರ ಕೊರತೆ, ಅಸಮರ್ಪಕ ಶಾಚಾಲಯ ಸೌಲಭ್ಯಗಳು, ಅಥವಾ ಶಿಥಿಲಗೊಂಡ ಶಾಲಾ ಬೇಲಿ. ಈ ವಿಚಾರಗಳಿಗೆ ಒಂದು ಪೂರಕ ಪ್ರತಿಕ್ರಿಯೆ ಸಿಗುವಹಾಗೆ ನೀವು ಈ ಕೊರತೆಗಳನ್ನು ಹೇಗೆ*

*ಮಂಡಿಸುತ್ತೀರಿ?*

*ಚರ್ಚೆ*

*ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ವಿವಿಧ ಸಂಸ್ಥೆಗಳ ಪ್ರತಿನಿಧಿಗಳೊಡಗೂಡಿ ಕಾರ್ಯನಿರ್ವಹಿಸುವುದು, ಸಲಹೆ ನೀಡುವುದು ಮತ್ತು ಸಂಧಾನ ಮಾಡಿಕೊಳ್ಳುವುದು ಅತ್ಯಂತ ಗಂಭೀರ ಸವಾಲಾಗಿದೆ. ಒಬ್ಬ ಶಾಲಾ ನಾಯಕನಾಗಿ ನೀವು ಕೈಗೊಳ್ಳಬೇಕಾದ ಪ್ರಥಮ ಪ್ರಯತ್ನವೇನೆಂದರೆ, ನಿಮ್ಮ ಶಾಲಾ ಅಭಿವೃದ್ಧಿ ಯೋಜನೆಯಲ್ಲಿ ಈಗಾಗಲೇ ನೀವು ಎಸ್.ಎಂ.ಸಿ.ಯೊಂದಿಗೆ (ಜಂಟಿಯಾಗಿ ಯೋಜಿಸಿದಂಥಹ) ಅಥವಾ ನಿಮ್ಮ ಶಾಲೆಯ ಅಗತ್ಯತೆಗಳು ಮತ್ತು ಅವಶ್ಯಕತೆಗಳ ಕುರಿತು ನಡೆಸಬೇಕಾದ ಚಿಂತನೆ. ನೀವು, ಈಗಾಗಲೇ ಇದನ್ನು ಕೈಗೊಂಡಿರಬಹುದು.*

*ಇನ್ನೂ ವಿವಿಧ ಕ್ಷೇತ್ರಗಳಲ್ಲಿ ಕೈಗೊಳ್ಳಬೇಕಾದ ಸಾಕಷ್ಟು ವಿಚಾರಗಳಿವೆ (ಮೂಲಭೂತ ಸೌಕರ್ಯಗಳು, ಬೋಧನೆ ಮತ್ತು ಕಲಿಕೆ, ಹಾಜರಾತಿ, ಸಮುದಾಯದೊಂದಿಗೆ ಸಂಪರ್ಕ ಹೊಂದುವುದು), ಹಾಗೂ ನಿರೀಕ್ಷಿತ ಅಭಿವೃದ್ಧಿಗಳನ್ನ ಕೈಗೊಳ್ಳಲು ಸಂಪನ್ಮೂಲಗಳ ಕೊರತೆ ಉಂಟಾಗಬಹುದು. ನಿಮ್ಮ ಮುಂಗಾಣ್ಕೆ ಮತ್ತು ಗುರಿಗಳನ್ನು ಈಡೇರಿಸಲು ಎಸ್.ಎಂ.ಸಿ ಸದಸ್ಯರು ಅಥವಾ ಸಹಾಯ ಮತ್ತು ಬೆಂಬಲ ನೀಡಬಲ್ಲ ಪ್ರಮುಖ ಜನರು ಅಥವಾ ಸ್ಥಳೀಯ ನಾಯಕರ ಪಟ್ಟಿಮಾಡುವುದು ನಿಮಗೆ ಅನುಕೂಲಕರವಾಗುತ್ತದೆ.*

*ನಿಮ್ಮ ರಾಜ್ಯದಲ್ಲಿ ಮುಂದುವರೆದಿರವಂಥಹ ಅಥವಾ ಲಭ್ಯವಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಗುರುತಿಸಿ ಸೂಕ್ಷ್ಮವಾಗಿ ಪರಿಶೀಲಿಸುವುದು ಮತ್ತೊಂದು ಮುಖ್ಯ ಅಂಶವಾಗಿದೆ. ಇವುಗಳ ಬಗೆಗಿನ ಅರಿವಿನಿಂದ ನಿಮ್ಮ ಶಾಲೆಯಲ್ಲಿ ಸಂಪನ್ಮೂಲಗಳ ವಿತರಣೆ ಮತ್ತು ಅವಕಾಶಗಳನ್ನು ಪ್ರತಿಪಾದಿಸಲು ಸಹಕಾರಿಯಾಗಿರುತ್ತದೆ.*

*ಒಬ್ಬ ಶಾಲಾ ನಾಯಕನಾಗಿ, ವಿವಿಧ ರಾಜ್ಯ ಮಟ್ಟದ ಸಂಸ್ಥೆಗಳು ನಿಮ್ಮ ಶಾಲೆಯ ಗುಣಮಟ್ಟ ಹೆಚ್ಚಿಸಲು ಯಾವ ರೀತಿಯಲ್ಲಿ ಬೆಂಬಲ ನೀಡಬಹುದೆಂಬ ಮಾಹಿತಿ ನಿಮಗಿರಬೇಕು. ಮಾಹಿತಿ ಹೊಂದಿರಲು ಮತ್ತು ಪ್ರಭಾವಿಸಲು ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಉತ್ತಮ ಸಂಬಂಧ ಬೆಸೆಯಲು ಮತ್ತು ನೇರವಾಗಿ ಕೆಲಸ ಮಾಡುವ ಅಗತ್ಯವಿದೆ.*

*ನಿಮ್ಮ ಶಾಲೆಗೆ ಸಂಪನ್ಮೂಲಗಳನ್ನು ಪಡೆಯಲು ಮಾತ್ರವಲ್ಲದೇ, ಸೌಲಭ್ಯಗಳನ್ನು ಪಡೆಯಲು, ಸಮಸ್ಯೆಗಳನ್ನು ಬಗೆಹರಿಸಲು, ಪ್ರಮುಖ ಶಾಲಾ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು, ಪ್ರಗತಿಯ ಉಸ್ತುವಾರಿ ಹಾಗೂ ವಿಶೇಷವಾಗಿ ಎಲ್ಲಾ ವಿದ್ಯಾರ್ಥಿಗಳ ಕಲಿಕೆಯನ್ನು ಖಾತರಿ ಪಡಿಸಲು ಎಂಬುದನ್ನು ರಾಜ್ಯಮಟ್ಟದೊಂದಿಗೆ ಕಾರ್ಯ ನಿರ್ವಹಿಸುವಾಗ ಮನಗಾಣುತ್ತೀರಿ. ಈ ಕೆಳಕಂಡ ವ್ಯಕ್ತಿ ಅಧ್ಯಯನದಲ್ಲಿ, ಶಾಲೆ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳ ನಡುವೆ ಪರಸ್ಪರ ಆಶಯ ವಿನಿಮಯ ಹಾಗೂ ಬಾಂಧ್ಯವ್ಯ ಹೆಚ್ಚಿಸಲು, ಒಬ್ಬ ಕ್ರಿಯಾಶೀಲ ಶಿಕ್ಷಕರಾಗಿ ನೀವೊಂದು ಫಲಾನುಭವಿ ಹಾಗೂ ಚಂದಾದಾರರೂ ಹೌದು ಎಂಬುದನ್ನು ಮನಗಾಣುವಿರಿ.*

## ವ್ಯಕ್ತಿ ಅಧ್ಯಯನ 1: ಡಯಟ್‌ನೊಂದಿಗೆ ಕೆಲಸ ನಿರ್ವಹಿಸುವ ಶ್ರೀಮತಿ ಮಿಸ್ತ್ರಿ

*ಶ್ರೀಮತಿ ಮಿಸ್ತ್ರಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ನಲ್ಲಿ ಕಾರ್ಯ ನಿರ್ವಹಿಸುತ್ತಿರುವ, 12 ವರ್ಷಗಳಿಗೂ ಮಿಗಿಲಾದ ಅನುಭವೀ ಶಾಲಾ ನಾಯಕಿ ಹಾಗೂ ಡಯಟ್‌ನ ಪ್ರಾಂಶುಪಾಲರೊಂದಿಗೆ ನಿರಂತರ ಸಂವಹನಹೊಂದಿರುವುದರಿಂದ, ನೂತನ ಬೋಧನಾ ವಿಧಾನಗಳು ಮತ್ತು ತನ್ನ ವಿದ್ಯಾರ್ಥಿಗಳಿಗೆ ಬೋಧಿಸಲು ಅಗತ್ಯ ಸಂಪನ್ಮೂಲಗಳ ಅಧಿಕೃತ ಮಾಹಿತಿ ಹೊಂದಿದ್ದ ವರಾಗಿದ್ದ ರು.*

*ಶಾಲೆಯಲ್ಲಿ ಶಿಕ್ಷಕರ ಕೊರತೆಯಿಂದಾಗಿ ಡಯಟ್ ಆಯೋಜಿಸಲಾಗುತ್ತಿರುವ ತರಬೇತಿಗಳಿಗೆ ತನ್ನ ಶಿಕ್ಷಕರನ್ನು ಕಳುಹಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ, ಶಿಕ್ಷಕರ ನಿರಂತರ ವೃತ್ತಿಪರ ಅಭಿವೃದ್ಧಿ ಗೆ ಬದ್ಧರಾಗಿದ್ದು ದರಿಂದ, ಡಯಟ್‌ನ ಬೆಂಬಲದಿಂದ ಶಾಲೆಯಲ್ಲಿಯೇ ಕೆಲವು ಅಧಿವೇಶನಗಳನ್ನು ಆಯೋಜಿಸುತ್ತಿದ್ದ ರು. ಕೆಲವು ಮುಕ್ತ ಶೈಕ್ಷಣಿ ಕ ಸಂಪನ್ಮೂಲಗಳನ್ನು ಒದಗಿಸುವುದರ ಜೊತೆಗೆಕೆಲವು ವೆಬ್ ಸೈಟುಗಳನ್ನು ಶಿಫಾರಸ್ಸು ಮಾಡುವ ಮೂಲಕ ಅವರಿಗೆ ಸಹಾಯ ಮಾಡಿದರು.*

*ಇನ್ನೊಂದು ವಿಧದಲ್ಲಿ ಶ್ರೀಮತಿ ಮಿಸ್ತ್ರಿ, ಡಯಟ್‌ನ ಹಲವಾರು ತರಬೇತಿಗಳಿಂದ ಪ್ರಭಾವಿತರಾಗಿದ್ದ ಇವರು ಇತರೆ ಶಾಲೆಗಳಿಗೆ ತಾನು ಎದುರಿಸುತ್ತಿದ್ದ ಸಮಸ್ಯೆಗಳು ಹಾಗೂ ಅಡ್ಡಿ ಆತಂಕಗಳನ್ನು ಹೇಗೆ ಬಗೆಹರಿಸಿಕೊಂಡರು ಎಂದು ಅನುಭವ ಹಂಚಿಕೊಳ್ಳುವುದರ ಮೂಲಕ ತಿಳಿಸುತ್ತಿದ್ದರು.*

*ರಾಜ್ಯದಲ್ಲಿ ಗುಣಮಟ್ಟದ ಶಿಕ್ಷಣದಲ್ಲಾಗುತ್ತಿರುವ ಹೆಚ್ಚುತ್ತಿರುವ ಬದಲಾವಣೆಗಳು ಹಾಗೂ ನಾವೀನ್ಯತೆಯನ್ನಾಧರಿಸಿ, ಶಿಕ್ಷಕರ ತರಬೇತಿ ಕಾರ್ಯಕ್ರಮಗಳ ವಿನ್ಯಾಸ, ಅನುಷ್ಠಾನ ಹಾಗೂ ಯೋಜನೆಗಳಲ್ಲಿ ಡಯಟ್‌ಗೆ ಬೆಂಬಲ ನೀಡುವುದು ಮುಖ್ಯ ಎಂಬುದನ್ನು ಗುರುತಿಸಿದ್ದರಿಂದ ಡಯಟ್‌ನೊಂದಿಗಿನ ಬಾಂಧವ್ಯ ಕವಲೊಡೆದಿತ್ತು.*

**ಚಟುವಟಿಕೆ 2: ಪ್ರಮುಖ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ನಿಮ್ಮ ತೊಡಿಸಿಕೊಳ್ಳುವಿಕೆಯ ವಿಧ ಮತ್ತು ಪರಿಧಿಯ ಮೌಲ್ಯಮಾಪನ**

ಈ ಚಟುವಟಿಕೆಗಾಗಿ ಸಂಪನ್ಮೂಲ 1 ರಲ್ಲಿ ನೀಡಿರುವ ಖಾಲಿ ಕೋಷ್ಟಕವನ್ನು ಪರಿವೀಕ್ಷಿಸಿ. ಕೋಷ್ಟಕದ ಎಡಬದಿಯಲ್ಲಿ ಆರ್. 1.1 ರಲ್ಲಿ ಪ್ರಮುಖ ರಾಜ್ಯ ಮಟ್ಟದ ಸಂಸ್ಥೆಗಳ ಪಟ್ಟಿಯನ್ನು ಒಳಗೊಂಡಿದೆ. ಶಾಲಾ ನಾಯಕರಿಗೆ ಕೆಲಸ ಮಾಡಲು ಇದು ತೀರಾ ಸಮಂಜಸ. ಪ್ರತಿಯೊಂದು ಸಂಸ್ಥೆಯ ಎದುರಿನಲ್ಲಿ ನೀಡಿರುವ 4 ಕಾಲಂಗಳಲ್ಲಿ ಯಾವುದಾದರೂ ಒಂದು ಕಾಲಂ ನಲ್ಲಿ (✓) ಚಿಹ್ನೆಯನ್ನು ನೀವು ಎಷ್ಟರಮಟ್ಟಿಗೆ ತೊಡಗಿಕೊಂಡಿರುವಿರಿ ಎಂಬುದನ್ನು ಗುರುತಿಸಿ. ಉದಾ:, ಡಯಟ್ ಅಥವಾ ರಾಜ್ಯ ಶೈಕ್ಷಣಿಕ ಸಂಶೋಧನಾ ಹಾಗೂ ತರಬೇತಿ ಸಮಿತಿ (ಎಸ್.ಸಿ.ಇ.ಆರ್.ಟಿ) ಗಿಂತ ಸಿ.ಆರ್.ಸಿ ಮತ್ತು/ಅಥವಾ ಬಿ.ಆರ್.ಸಿ ಜೊತೆಗೆ ಹೆಚ್ಚಿನ ಸಂಪರ್ಕ ಹೊಂದಿರುತ್ತೀರಿ.

ಈ ಸಂಪರ್ಕ ದ್ವಿಮುಖವಾಗಿದೆಯೇ ಎಂದು ಆಲೋಚಿಸಿ, ಅಥವಾ ಅವರಿಂದ ನಿಮಗೆ ಮಾಹಿತಿ ರವಾನೆಯಾಗುತ್ತಿದೆಯೇ, ಅಥವಾ, ಇತರೆ ಸಂಸ್ಥೆಗಳ ಮುಖಾಂತರ ನಿಮ್ಮಿಂದ ಅವರಿಗೆ ಮಾಹಿತಿ ರವಾನಿಸಲಾಗುತ್ತಿದೆಯೇ. ಕೆಲವರೊಂದಿಗೆ ನಿಮಗೆ ಕನಿಷ್ಟ ಸಂಪರ್ಕ ಅಥವಾ ಸಂಪರ್ಕವೇ ಇಲ್ – ಬಹುಶಃ ನಿಮಗೆ ಅವರ ಪಾತ್ರ ಮತ್ತು ಜವಾಬ್ದಾರಿಯ ಅರಿವೂ ಸಹ ಇಲ್ಲದಯೇ ಇರಬಹುದು. ನೀವು ಯಾವ ವಿಚಾರಕ್ಕೆ (ಬಿಸಿಊಟ, ದತ್ತಾಂಶ ಕ್ರೂಢೀಕರಣ, ಮಾಹಿತಿ ಒದಗಣೆ, ಪರಿಕರಗಳ ತಯಾರಿ, ತರಬೇತಿ, ಶೈಕ್ಷಣಿಕ ಬೆಂಬಲ, ಇತ್ಯಾದಿ) ಅವರೊಂದಿಗೆ ಸಂಪರ್ಕ ಹೊಂದಿದ್ದೀರಿ ಎಂಬುದನ್ನು ಆರನೇ ಕಲಂನಲ್ಲಿ ದಾಖಲಿಸುವುದು ನಿಮಗೆ ಸಕಾರಿಯಾಗಿರುತ್ತದೆ. ಆ ಸಂಸ್ಥೆಯಲ್ಲಿ ನೀವಯ ಸಂಪರ್ಕದಲ್ಲಿರುವ ಮುಖ್ಯ ವ್ಯಕ್ತಿಯ ಹೆಸರನ್ನು ನಿಮಗೆ ತಿಳಿದಿದ್ದಲ್ಲಿ ದಾಖಲಿಸಿ, ಇವರು ಅತ್ಯಂತ ಹಿರಿಯ ವ್ಯಕ್ತಿಯಲ್ಲದೇ ಇರಬಹುದು, ಕೆಲವೊಮ್ಮೆ ಅವರು ನಿಮ್ಮ ಸ್ನೇಹಿತರೋ, ಸಂಬಂಧಿಗಳೊ ಅಥವಾ ಸೂಕ್ತ ವ್ಯಕ್ತಿಯೊಂದಿಗೆ ನಿಮ್ಮ ಸಂಪರ್ಕ ಏರ್ಪಡಿಸಲು ಸಹಾಯ ಮಾಡುವವರೂ ಆಗಿರಬಹುದು.

**ಚರ್ಚೆ**

ಈ ಚಟುವಟಿಕೆ ನಿಮಗೆ ತಿಳಿದವರ್ಯಾರು, ತಿಳಿಯದವರ್ಯಾರು ಎಂಬುದನ್ನು ಮನಗಾಣಲು, ಮತ್ತು ವ್ಯವಸ್ಥೆಯ ಯಾವ ಹಂತದಲ್ಲಿ ನಿಮ್ಮ ಸಂಪರ್ಕ ಜಾಲ ಬಲಿಷ್ಟವಾಗಿದೆ ಎಂದು ತಿಳಿಯಲು. ನಿಮಗೆ ಸಹಯೋಗತ್ವ ಹೊಂದಲು ಕ್ಲಿಷ್ಟಕರ ಎನಿನಿಸುವ ಮತ್ತು ಸಂಪರ್ಕ ಹೊಂದಲು ಪಟ್ಟಿಯಲ್ಲಿ ಇಲ್ಲದಂಥಹ ಸಂಸ್ಥೆಗಳಿವೆಯೇ? ಪ್ರಮುಖವಾಗಿ, ಪ್ರಸ್ತುತ ನೀವು ಯಾವ ಬಗೆಯ ಸಹಯೋಗಿತ್ವವನ್ನು ಹೊಂದಿರುವಿರಿ, ಮತ್ತು ಒಬ್ಬ ಶಾಲಾ ನಾಯಕನಾಗಿ ಯಾವ ಪ್ರಮುಖ ವಲಯಗಳಿಗೆ ಸಂಬಂಧಿಸಿದಂತೆ ನೀವು ಅವರೊಂದಿಗೆ ಕಾರ್ಯ ನಿರ್ವಹಿಸುತ್ತಿರುವಿರಿ ಅಥವಾ ಆವರು ನಿಮ್ಮನ್ನು ಸಂಪರ್ಕಿಸುತ್ತಾರೆ? ಎಲ್ಲಿಂದ ಮತ್ತು ಹೇಗೆ ಪ್ರಾರಂಭಿಸಬೇಕೆಂಬ ಅನುಮಾನವಿದ್ದಲ್ಲಿ, ವೃತ್ತಿಪರ ಸಂಪರ್ಕ ಹೊಂದಲು ಶಾಲಾ ನಾಯಕರು ತಾವು ಸಂಪರ್ಕಿಸಬಹುದಾದ ಇತರೆ ಶಾಲಾ ನಾಯಕರ ಪಟ್ಟಿಯನ್ನು ತಯಾರಿಸುವುದು. ಒಮ್ಮೆ ನೀವು ಸಂಪರ್ಕ ಹೊಂದಿದ್ದಲ್ಲಿ, ಅದನ್ನು ಜೀವಂತವಾಗಿರಿಸಲು ಒಂದು ಯೋಜನೆಯನ್ನು ಕೈಗೊಳ್ಳಬೇಕು. ಇದು ದ್ವಿಮುಖ ಸಂವಹನ ಅಭಿವೃದ್ದಿ ಪಡಿಸುವಂತದ್ದಾಗಿರಲೂ ಬಹುದು (ಉದಾ: ಫೋನ್, ಇ–ಮೇಲ್, ಪತ್ರ, ವೈಯಕ್ತಿಕವಾಗಿ ಅಥವಾ ಆನ್ ಲೈನ್ ಸಮುದಾಯ ಮಾಧ್ಯಮ ಸೈಟ್ಗಳಾದ ಲಿಂಕ್ಡಿನ್).

# 2 ಇತರೆ ಶಾಲೆಗಳು ಮತ್ತು ಎನ್.ಜಿ.ಓ.ಗಳೊಂದಿಗೆ ಸಹಭಾಗಿತ್ವ

ನಿಮ್ಮ ರಾಜ್ಯ ಅಥವಾ ತಾಲ್ಲೂಕಿನ ಇತರೆ ಶಾಲೆಗಳು ನಿಮಗೆ ಮುಖ್ಯ ಸಂಪನ್ಮೂಲಗಳು ಹಾಗೂ ಸಲಹೆ ಮತ್ತು ಬೆಂಬಲದ ಮೂಲಗಳೂ ಆಗಿವೆ. ನಿಮ್ಮ ಶಾಲೆಯ ಆಂತರಿಕ ಸವಾಲುಗಳ ಬಗೆಗೆ ಗಮನ ಹರಿಸುವುದು ಅತ್ಯಂತ ಸುಲಭದ ಕೆಲಸ, ಆದರೆ, ಇತರೆ ಶಾಲೆಗಳಿಗೂ ಇಂತಹ ಸವಾಲುಗಳಿರುತ್ತವೆ ಎಂಬುದನ್ನು ಮರೆಯದಿರಿ, ಹಾಗೆಯೇ ಈ ಶಾಲೆಗಳು ತಮ್ಮ ಸಮಸ್ಯೆಗಳಿಗೆ ಕಂಡು ಕೊಂಡಿರುವ ಪರಿಹಾರ ನಿಮಗೆ ಸಹಕಾರಿಯಾಗಬಹುದು. ಹಾಗಾಗಿ ನೀವು ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮತ್ತು ಕಲಿಕೆಯನ್ನುಂಟುಮಾಡಲು ನೀವು ಇತರೆ ಶಾಲೆಗಳೊಂದಿಗೆ ಸೇರಿ ಕೆಲಸಮಾಡುವುದು ಒಳ್ಳೆಯದು. ಉದಾ: ನೀವು ನಿಮ್ಮ ಕ್ಲಸ್ಟರ್‌ನಲ್ಲಿ ಸಮೀಪವಾಗಿರುವ ಇತರೆ 3 ಶಾಲೆಗಳೊಂದಿಗೆ ಸಹಭಾಗಿತ್ವದಲ್ಲಿ ವಿಜ್ಞಾನ ಪ್ರಯೋಗಾಲಯಕ್ಕೆ ಅಗತ್ಯವಿರುವ ಉಪಕರಣಗಳಿಗಾಗಿ ಹಣ ಸಂಗ್ರಹಿಸಿ, ಈ ಉಪಕರಣಗಳನ್ನು ಅವಧಿಯಾನುಸಾರ ಮೂರು ಶಾಲೆಗಳೂ ಬಳಸುವಂತೆ ಮಾಡುವುದು, ಅಥವಾ ನೀವು 3 ಶಾಲೆಯವರೂ ಸೇರಿ ಇಂಟರ್‌ಸ್ಕೂಲ್ ಸ್ಪೋರ್ಟ್ಸ್ ಆಯೋಜಿಸಿವುದರಿಂದ ವಿದ್ಯಾರ್ಥಿಗಳ ಸ್ಪೋರ್ಟ್ಸ್ ಪಠ್ಯಕ್ರಮವನ್ನೂ ಸಹ ತಲುಪಿದಂತಾಗುತ್ತದಲ್ಲದೇ, ಹಿರಿಯ ವಿದ್ಯಾರ್ಥಿಗಳಿಗೆ ಕೋಚಿಂಗ್ ಮತ್ತು ಆಯೋಜಿಸುವ ಜವಾಬ್ದಾರಿಗಳನ್ನು ನಿರ್ವಹಿಸಲು ಸಹಕಾರಿಯಾಗುತ್ತದೆ.

ಇದರಂತೆ, ಸಾಮಾನ್ಯವಾಗಿ ಸರ್ಕಾರೇತರ ಸಂಸ್ಥೆಗಳೆಂದು ಕರೆಯಲ್ಪಡುವ ಸ್ಥಳೀಯ ಸ್ವಯಂಸೇವಾ ಸಂಸ್ಥೆಗಳೊಂದಿಗೂ ಸಹ ನೀವು ಸಹಭಾಗಿತ್ವದೊಂದಿಗೆ ಕಾರ್ಯ ನಿರ್ವಹಿಸಬಹುದು. ನಿಮ್ಮ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸಲು ಈ ಸಂಸ್ಥೆಗಳು ಪರ್ಯಾಯ ಮಾರ್ಗೋಪಾಯಗಳನ್ನು ಹೊಂದಿರಬಹುದು ಮತ್ತು ವಿವಿಧ ಕಲಿಕಾ ಸಂಪನ್ಮೂಲಗಳು, ವಿಧಾನಗಳು, ಪರಿಕರಗಳನ್ನು ಒದಗಿಸಬಹುದು ಮತ್ತು ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವುದರಿಮದ ನಿಮ್ಮ ಶಾಲೆಗೆ ಪ್ರಯೋಜನವಾಗಬಹುದು.



**ಚಿತ್ರ 2** ಇತರೆ ಶಾಲೆಗಳು ಮತ್ತು ಎನ್.ಜಿ.ಓ.ಗಳೊಂದಿಗಿನ ಸಹಭಾಗಿತ್ವದಿಂದ ನಿಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುತ್ತದೆ.

## ವ್ಯಕ್ತಿ ಅಧ್ಯಯನ 2: ನೇತೃತ್ವವಹಿಸುವುದು ಮತ್ತು ಮಾರ್ಗದರ್ಶನದ ಮೂಲಕ ಕಲಿಕೆ

ಭಾರತದ ಮೆಟ್ರೋ ನಗರಗಳಲ್ಲಿ ನಡೆಸಲಾಗುತ್ತಿರುವ ಕೆಲವು ರಾತ್ರಿ ಶಾಲೆಗಳ ಯಶಸ್ವೀ ಶಾಲಾ ನಾಯಕರು ಇತರೆ ರಾತ್ರಿ ಶಾಲೆಗಳಿಗೆ ಭೇಟಿ ನೀಡಿ ತಮ್ಮ 'ಯಶೋಗಾಥೆ'ಗಳನ್ನು ಹೇಳುವುದರ ಮೂಲಕ ಮಾರ್ಗದರ್ಶನ ನೀಡುತ್ತಾರೆ. ಶಾಲಾ ನಾಯಕರು ಪರಸ್ಪರ ಚರ್ಚಿಸಲು ಪ್ರಾರಂಭಿಸಿ ತಮ್ಮ ಸವಾಲುಗಳು, ಸಾಧನೆಗಳು ಮತ್ತು ಕಾರ್ಯವಿಧಾನಗಳನ್ನು ಹಂಚಿಕೊಳ್ಳುವದು ಈ ಪ್ರಯತ್ನದ ಉದ್ದೇಶವಾಗಿದೆ. ಈ ಬಗೆಯ ವಿಚಾರ ವಿನಿಮಯದ ಅವಕಾಶಗಳಿಂದ ಶಾಲಾ ನಾಯಕತ್ವವನ್ನು ವೃದ್ಧಿಸಲು ಮತ್ತು ಮಕ್ಕಳ ಕಲಿಕೆಯನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗಿದೆ. ಭೇಟಿಯ ಸಂದರ್ಭದಲ್ಲಿ, ಪರಿಣಿತ ಮಾರ್ಗದರ್ಶಕರು/ಆಪ್ತ ಸಲಹಾಗಾರರು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಸಲಹೆ ಪಡೆಯುವವರನ್ನು ಪುನಃ ಶಾಲೆಗೆ ಬಂದು ಗಮನಿಸಲು ಆಹ್ವಾನಿಸುತ್ತಾರೆ.

ಆರಂಭದ ಭೇಟಿಗಳಲ್ಲಿ ಯಶೋಗಾಥೆಗಳನ್ನು ಆಲಿಸುವುದು ಮತ್ತು ಹಂಚಿಕೊಳ್ಳವುದನ್ನು ಕೇಂದ್ರೀಕರಿಸಲಾಗುವುದು, ಇದನ್ನು, ಒಂದು ಸಕಾರಾತ್ಮಕ ಸಂಬಂಧಗಳನ್ನು ಬೆಳೆಸಲು ಇಡುವ ಪ್ರಥಮ ಹೆಜ್ಜೆಯನ್ನಾಗಿ ಭಾವಿಸಬಹುದು. ಸಲಹೆ ಪಡೆಯುವವರನ್ನು ಮಾರ್ಗದರ್ಶಕರು ಅನೌಚಾರಿಕವಾಗಿ ಶಾಲೆಯ ಆವರಣದಲ್ಲಿ ನಡೆದಾಡುತ್ತಾ ಪರಿಚಯಿಸಿ, ದಿನ ನಿತ್ಯದ ಸನ್ನಿವೇಷಗಳು ಮತ್ತು ಕಾರ್ಯಕ್ರಮಗಳನ್ನು ಕೇವಲ ಆಲಿಸುತ್ತಾ ಹಾಗೂ ನೋಡುತ್ತಾ ಶಾಲೆಯ ವಿವಿಧ ಅಂಶಗಳನ್ನು ಗಮನಿಸುವುದು. ಈ ಬಗೆಯ ಅನೌಚಾರಿಕ ನಡೆದಾಟವು ಕ್ರಮೇಣ ಔಪಚಾರಿಕವಾಗಿ ತರಗತಿಗಳಲ್ಲಿ ನಡೆಯುವ ನಿರ್ದಿಷ್ಟ ಬೋಧನಾ ಕಲಿಕಾ ಪ್ರಕ್ರಿಯೆಗಳನ್ನು ಗಮನಿಸುವಂತಾಗಬೇಕು.

ಮಾರ್ಗದರ್ಶಕರ ಮತ್ತು ಸಲಹೆ ಪಡೆಯುವವರ ಭೇಟಿಗಳು ಶಾಲೆಯಲ್ಲಿನ ಕಲಿಕಾ ಪ್ರಕ್ರಿಯೆಗಳನ್ನು ಅರ್ಥೈಸಿಕೊಳ್ಳುವುದು ಮತ್ತು ಸಲಹೆ ಪಡೆಯುವವರಿಗೆ ತಮ್ಮ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವುದನ್ನು ಕೇಂದ್ರೀಕರಿಸುತ್ತದೆ. ಇಲ್ಲಿ ಮಾರ್ಗದರ್ಶಕರು ಶಾಲೆಯ 'ಪರಿವೀಕ್ಷಣೆ' ನಡೆಸುತ್ತಿದ್ದಾರೆ ಎಂಬ ಮನೋಭಾವ ಇರುವುದಿಲ್ಲ, ವಾಸ್ತವವಾಗಿ, ಇತರೆ ಶಾಲೆಗಳಿಗೆ ಭೇಟಿ ನೀಡುವುದರಿಂದ ಮತ್ತು ಸಲಹೆ ಪಡೆಯುವವರೊಂದಿಗೆ ಚರ್ಚಿಸುವುದರಿಂದ ಮಾರ್ಗದರ್ಶಕರೂ ಸಹ ಈ ಪ್ರಕ್ರಿಯೆಯ ಲಾಭ ಪಡೆಯುತ್ತಾರೆ. ದ್ವಿಮುಖ ಕಲಿಕಾ ಪ್ರಕ್ರಿಯೆಯ ಒಂದು ಉತ್ತಮ ಮಾರ್ಗದರ್ಶಕ ವಿಧಾನ ಎರಡೂ ಶಾಲೆಗಳ ಪ್ರಗತಿಗೆ ಎಡೆಮಾಡುಕೊಡುತ್ತದೆ.

## ಚಟುವಟಿಕೆ 3: ಸಹಭಾಗಿತ್ವಕ್ಕಾಗಿ ಯೋಜನೆಯ ತಯಾರಿ

ವ್ಯಕ್ತಿ ಅಧ್ಯಯನ 2, ಇದು ಸ್ಥಳೀಯ ಸಹಭಾಗಿತ್ವವು ಹೇಗೆ ಶಾಲೆಯಲ್ಲಿ ಕಲಿಕೆ ಉಂಟಾಗುವಂತೆ ಮತ್ತು ಇದರಲ್ಲಿ ತೊಡಗಿಕೊಂಡಿರುವ ಶಾಲಾ ನಾಯಕರಿಗೆ ಬೆಂಬಲವಾಗಿರುತ್ತದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ನೀಡುತ್ತದೆ. ಈಗ, ನಿಮ್ಮ ಶಾಲೆಯ ಸನ್ನಿವೇಶಗಳನ್ನು ಗಮನದಲ್ಲಿರಿಸಿ, ನಿಮ್ಮ ಕ್ಷೇತ್ರದಲ್ಲಿರುವ ಯಾವ ಶಾಲೆಗಳು ಮತ್ತು ಎನ್.ಜಿ.ಓ.ಗಳೊಂದಿಗೆ ನೀವು ಸಹಭಾಗಿತ್ವ ಹೊಂದಬಹುದು ಎಂದು ಯೋಚಿಸಿ, ನಿಮ್ಮ ಕಲಿಕಾ ದಿನಚರಿಯಲ್ಲಿ ಅವುಗಳ ಪಟ್ಟಿಮಾಡಿ.

ಇತರರನ್ನೂ ನಿಮ್ಮ ಶಾಲೆಯಲ್ಲಿ ತೊಡಗಿಸಿಕೊಳ್ಳಲು ನೀವು ಈ ಚಟುವಟಿಕೆಯನ್ನು ವಿಸ್ತರಿಸಲು ಇಚ್ಛಿಸಬಹುದು. ಉದಾ: ಒಂದು ಚಾರ್ಟ್ ಹಾಕಿ ಅಲ್ಲಿ ನಿಮ್ಮ ಸಿಬ್ಬಂದಿಯು ಇತರೆ ಶಾಲೆಗಳು ಮತ್ತು ಎನ್.ಜಿ.ಓ.ಗಳ ಹೆಸರುಗಳನ್ನು ಬರೆದು, ಆ ಸಂಸ್ಥೆಗಳೊಂದಿಗೆ ತಮಗಿರುವ ಸಂಪರ್ಕವನ್ನೂ ಹಂಚಿಕೊಳ್ಳುವುದು – ಅವರು ಆ ಸಂಸ್ಥೆಗಳೊಂದಿಗೆ ಈಗಾಗಲೇ ಹೊಂದಿರುವ ಸಂಪರ್ಕಗಳ ಆಧಾರದ ಮೇಲೆ ನೀವು ಸಹಭಾಗಿತ್ವ ಬೆಳೆಸಬಹುದು.

ಒಮ್ಮೆ ನೀವು ಸಹಭಾಗಿತ್ವ ಹೊಂದಲು ಸಾಧ್ಯವಾಗುವ ಸಂಸ್ಥೆಗಳ ಪಟ್ಟಿ ಸಿದ್ಧವಾದ ನಂತರ, ನಿಮ್ಮ ಸಹಭಾಗಿತ್ವ ಯಾವ ಅಭಿವೃದ್ಧಿ ವಲಯವನ್ನು ಕೇಂದ್ರೀಕರಿಸಬಹುದು ಎಂಬುದನ್ನು ಆಲೋಚಿಸಿ. ಈ ನಿಮ್ಮ ಆಲೋಚನೆ ಈಗಾಗಲೇ ನಿಮ್ಮ ಶಾಲೆಯಲ್ಲಿ ನೀವು ಎದುರಿಸುತ್ತಿರುವ ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಅಗತ್ಯಗಳನ್ನು ಪೂರೈಸುವುದು ಅಥವಾ ತಾಂತ್ರಿಕತೆಯ ಲಭ್ಯತೆ ಇಂಥಹ ಸಮಸ್ಯೆಗಳಿಗೆ ಸಂಬಂಧಿಸಿರಬಹುದು. – ಉದಾಹರಣೆಗೆ, ನಿಮ್ಮ

ಶಾಲಾಭಿವೃದ್ಧಿ ಯೋಜನೆಯಲ್ಲಿ – ಅಥವಾ ಈವರೆಗೆ ನೀವು ಗಣನೆಗೆ ತೆಗೆದುಕೊಂಡಿರದ ಒಂದು ಅವಕಾಶ. ಮತ್ತೆ ನೀವು ಈ ವಿಚಾರವನ್ನು ನಿಮ್ಮ ಸಿಬ್ಬಂದಿಯೊಂದಿಗೆ ಚರ್ಚಿಸಿದಲ್ಲಿ, ಅವರು ತಮ್ಮ ಆಸಕ್ತಿ ಮತ್ತು ಕೌಶಲಗಳಿಗೆ ಸಂಬಂಧಿಸಿದಂತೆ ನಿಮಗೆ ಹಲವು ಸಲಹೆಗಳನ್ನೂ ನೀಡಬಹುದು. ಉದಾಹರಣೆಗೆ, ಒಬ್ಬ ಕಿರಿಯ ವಯಸ್ಸಿನ ಡಾನ್ಸ್ ಟೀಚರ್, ಸ್ಥಳೀಯ ನೃತ್ಯ ಕಲೆಯನ್ನು ಪ್ರದರ್ಶಿಸ ಬಹುದಾದಂಥಹ ವಿಶಾಲ ಕೋಣೆ ಹೊಂದಿರುವ ಶಾಲೆಯೊಂದಿಗೆ ಸಹಭಾಗಿತ್ವ ಹೊಂದಲು ಸಲಹೆ ನೀಡಬಹುದು, ಈ ಅವಕಾಶವನ್ನು ಬಳಸಿ ಕೊಳ್ಳುವುದರಿಂದ, ಆಕೆಯ ಕೌಶಲಗಳನ್ನು ಬೇರೊಂದು ಶಾಲೆಯೊಂದಿಗೆ ಹಂಚಿಕೊಳ್ಳುವುದರ ಮೂಲಕ ಶಾಲೆಯ ಸ್ಥಳವನ್ನು ಬಳಸಿಕೊಳ್ಳುವ ವಿನಿಮಯ ಮಾಡಿಕೊಳ್ಳುವುದರಿಂದ ಎರಡೂ ಶಾಲೆಗಳ ವಿದ್ಯಾರ್ಥಿಗಳು ಬೆರೆಯಲು ಅವಕಾಶ ಕಲ್ಪಿಸಿದಂತಾಗುತ್ತದೆ.

ನಿಮ್ಮ ಬಳಿ ಸಾಧ್ಯವಾದಷ್ಟು ವಿಚಾರಗಳು ಮತ್ತು ಸಾಧ್ಯವಿರುವಷ್ಟು ಭಾಗೀದಾರರು ಇದ್ದಲ್ಲಿ, ಮುಂದಿನ ಹೆಜ್ಜೆಯು ನಿಮ್ಮ ಶಾಲೆಯ ಜೊತೆಗೆ ಸಹಯೋಗ ಹೊಂದಲು ಆಸಕ್ತಿಯುಳ್ಳ ಸಂಸ್ಥೆಗಳನ್ನು ಸಂಪರ್ಕಿಸುವುದು ಹಾಗೂ ಅವರ ಆಸಕ್ತಿಯ ಮಟ್ಟವನ್ನು ಪರಿಶೀಲಿಸುವುದು. ನೀವು ಗಮನದಲ್ಲಿರಿಸಬೇಕಾದ ಒಂದು ವಿಚಾರವೆಂದರೆ, ಪರಸ್ಪರರಿಗೆ ಅನುಕೂಲವಾದಲ್ಲಿ ಅಥವಾ ಪ್ರಯೋಜನವಿದ್ದಲ್ಲಿ, ಅವರಿಗೆ ಆಗುವ ಪ್ರಯೋಜನಗಳನ್ನು ಗುರುತಿಸಿದಾಗ ಅವರು ಸಹಯೋಗ ಹೊಂದಲು ಇಚ್ಚಿಸುತ್ತಾರೆ, ಆದುದರಿಂದ ಅವರ ಆಸಕ್ತಿಗನುಸಾರವಾಗಿ ತೊಡಗಿಸಿಕೊಳ್ಳಲು ಮತ್ತು ಪರಸ್ಪರ ಚರ್ಚಿಸಲು ನೀವು ಕೆಲವು ವಿಚಾರಗಳನ್ನು ಮಂಡಿಸಬೇಕಾಗುತ್ತದೆ. ಹಾಗೆಯೇ, ಪಾಲುದಾರಿಗೆ ಎಂಬುದು ಒಂದು ದ್ವಿಮುಖವಾಗಿರುವುದರಿಂದ, ಜೊತೆಗೂಡಿ ಕೆಲಸ ಮಾಟುವ ವಿಧಾನಗಳ ಕುರಿತು ಪರಸ್ಪರ ಸಮ್ಮತಿಸಬೇಕು. ನೀವು ಮಂಡಿಸುವ ವಿಚಾರಗಳಿಂದ ನಿಮ್ಮ ಯೋಜನೆಯನ್ನು ಉತ್ತಮಪಡಿಸುವಲ್ಲಿ ನಿಮ್ಮ ಭಾಗೀದಾರರು ಅವರ ವಿಚಾರಗಳನ್ನು ಮಂಡಿಸಲು ಯಾವ ರೀತಿಯ ಅಡಚಣೆಯನ್ನೂ ಉಂಟುಮಾಡಬಾರದು.

ಸಂಪನ್ಮೂಲ 2 ರಲ್ಲಿ ನೀಡಿರುವ ನಮೂನೆಯನ್ನು ಬಳಸಿ, ನಿಮ್ಮ ಸಹಭಾಗಿತ್ವದ ವಿಚಾರಗಳಲ್ಲಿ ಒಂದನ್ನು ವ್ಯಾಪ್ತೀಕರಿಸಲು ಪ್ರಯತ್ನಿಸಿ. ನೀವು ಎಲ್ಲವನ್ನೂ ಭರ್ತಿ ಮಾಡಲು ಅಥವಾ ನೀವೊಬ್ಬರೇ ಅದನ್ನು ಅಂತಿಮ ಗೊಳಿಸಲು ಸಾಧ್ಯವಾಗದಿರಬಹುದು, ಆದರೆ, ನೀವು ಪ್ರಬಲ ಪಾಲುದಾರದೊಂದಿಗೆ ಚರ್ಚಿಸುವಾಗ ಈ ಪ್ರಕ್ರಿಯೆ ನಿಮಗೆ ಒಂದು ಚೌಕಟ್ಟನ್ನು ನೀಡಲು ಸಾಧ್ಯವಾಗುತ್ತದೆ ಮತ್ತು ಅದರ ಸಾಧಕ–ಬಾಧಕಗಳ ಕುರಿತು ಚಿಂತಿಸಲು ಅನುವುಮಾಡಿಕೊಡುತ್ತದೆ.

**ಚರ್ಚೆ**

ನಿಮ್ಮ ಪ್ರಬಲ ಭಾಗೀದಾರರ ಬಗೆಗೆ ಮತ್ತು ಸಹಯೋಗ ಹೊಂದಬಹುದಾದ ಕ್ಷೇತ್ರಗಳ ಕುರಿತು ಸಾಕಷ್ಟು ಆಲೋಚನೆ ಹೊಂದಿರಬಹುದು. ಸಹಭಾಗಿತ್ವ ಮತ್ತು ಪಾಲುದಾರಿಕೆಯು ಮುಂದೆ ಸಾಗಲು ಸಮಯ ಮತ್ತು ಪ್ರಯತ್ನಗಳ ಅಗತ್ಯವಿದೆ ಎಂಬುದನ್ನು ನೆನಪಿಡಿ, ಆದುರಿಂದ ಏಕಕಾಲದಲ್ಲಿ ಎಷ್ಟು ಪಾಲುದಾರಿಕೆಗಳೊಂದಿಗೆ ನಿಮಗೆ ತೊಡಗಿಕೊಳ್ಳಲು ಸಾಧ್ಯ ಎಂಬ ವಾಸ್ತವಿಕತೆಯ ಕುರಿತು ನಿಮಗೆ ಅರಿವಿರಲಿ. ಪಾಲುದಾರಿಕೆಗಾಗಿ ಯೋಜನೆಯನ್ನು ಅಭಿವೃದ್ಧಿ ಪಡಿಸುವ ಸಂದರ್ಭದಲ್ಲಿ, ವ್ಯಾಪ್ತೀಕರಣದ ಸಮಯದಲ್ಲಿ ಹೆಚ್ಚಿನ ಜನರು ತೊಡಗಿಸಿಕೊಳ್ಳುವಂತೆ ಮಾಡುವುದು ಮುಖ್ಯ ಎಂಬುದು ನಿಮ್ಮ ಗಮನದಲ್ಲಿರಬೇಕು. ಪಾಲುದಾರಿಕೆಗೆ ಹೆಚ್ಚಿನ ಸಮಯ ನೀಡಬೇಕಾಗುತ್ತದೆ, ಎರಡೂ ಕಡೆಯವರು ಅಪೇಕ್ಷಿತ ಫಲಿತಾಂಶ, ಸವಾಲು ಮತ್ತು ಅಪಾಯಗಳ ಕುರಿತು ಸ್ಪಷ್ಟತೆ ಹೊಂದಿಲ್ಲದಿದ್ದಲ್ಲಿ ಪಾಲುದಾರಿಕೆ ಫಲಕಾರಿಯಾಗುವುದಿಲ್ಲ.

# 3. ಸ್ಥಳೀಯ ವ್ಯವಹಾರಗಳು ಮತ್ತು ಸಮುದಾಯ ಆಧಾರಿತ ಸಂಸ್ಥೆಗಳೊಂದಿಗೆ ಸಹಭಾಗಿತ್ವ.

ಶಾಲೆಯನ್ನು ಮುನ್ನಡೆಸಲು ಸಮುದಾಯ ಆಧಾರಿತ ಸಂಸ್ಥೆಗಳು ಮತ್ತು ಸ್ಥಳೀಯ ವ್ಯವಹಾರಗಳ ಜೊತೆಗೆ ಸಾಕಷ್ಟು ಸಂಯೋಜನೆ ಹೊಂದಿರುವುದು ಅಗತ್ಯ. ನಿಮ್ಮ ಶಾಲೆಯ ಸಮೀಪದಲ್ಲೇ ಹಲವಾರು ಸಮುದಾಯ ಸಂಸ್ಥೆಗಳಿರಬಹುದು. ಅದರಲ್ಲಿ ಕೆಲವು ತಾಯಂದಿರ ಸಂಘಟನೆ ಅಥವಾ ಸ್ವಸಹಾಯ ಸಂಘಗಳ ಹಾಗೆ ಅನೌಪಚಾರಿಕವಾಗಿರುತ್ತವೆ; ಇತರರು ಹೆಚ್ಚು ವ್ಯವಸ್ಥಿತ ರೀತಿಯಲ್ಲಿ ಸೇವೆಗಳನ್ನು ಮತ್ತು ಕಾರ್ಯಕ್ರಮಗಳನ್ನು ನೀಡುವುದರಿಂದ ಸಂಪನ್ಮೂಲಗಳ ಕೊರತೆಯನ್ನು ನೀಗಿಸಿ ವಿದ್ಯಾರ್ಥಿಗಳಿಗಿರುವ ಅವಕಾಶಗಳು ಹೆಚ್ಚುವಂತೆ ಮಾಡುತ್ತದೆ. ಇದರಲ್ಲಿ ಸಾಕ್ಷರತೆಯನ್ನು ಮೊದಲುಗೊಂಡು ಕಲೆ, ಜೀವನ ಕೌಶಲ, ವೈಜ್ಞಾನ ಮತ್ತು ಕೃಷಿಯ ಜನಪ್ರಿಯತೆ, ಸಂವಹನಾ ಕೌಶಲ ಮತ್ತು ವೃತ್ತಿಪರ ಮಾರ್ಗದರ್ಶನ ಮುಂತಾದ ಸಂಖ್ಯಾ ಕೌಶಲವನ್ನೂ ಒದಗಿಸುತ್ತದೆ. ಇನ್ನಿತರರಲ್ಲಿ ಕೆಲವರು ಬಿಸಿಊಟ, ಇನ್ನು ಕೆಲವರು ವಿದ್ಯಾರ್ಥಿವೇತನ ಮತ್ತೆ ಕೆಲವರು ಶಾಲೆಯ ಮೂಲಭೂತ ಸೌಕರ್ಯಗಳಿಗೆ ಸಹಾಯ ಮಾಡುತ್ತಾರೆ, ಶಾಲೆಗಳು ಮತ್ತು ಸಮುದಾಯ ಸಂಸ್ಥೆಗಳ ಸಹಭಾಗಿತ್ವ ಶಿಕ್ಷಕರ ಕೌಶಲವನ್ನು ಪ್ರಶಂಶಿಸುವುದು ಮತ್ತು ಮೇಲೆ ತಿಳಿಸಿದ ಎಲ್ಲಾ ಸೇವೆಗಳು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದನ್ನು ಖಚಿತ ಪಡಿಸುವುದು.



ವೀಡಿಯೋ: ಶಾಲಾ ನಾಯಕತ್ವ – ಶಾಲೆ–ಸಮುದಾಯ ಸಹಭಾಗಿತ್ವದ ರಚನೆ

ನಿಮ್ಮ ನಾಯಕತ್ವದ ಜವಾಬ್ದಾರಿಯಲ್ಲಿ, ಈ ಸಹಭಾಗಿತ್ವದ ಮೂಲಕ ಮಕ್ಕಳ ಕಲಿಕೆಯನ್ನು ಉತ್ತಮ ಪಡಿಸುವುದು ಮತ್ತು ಶಾಲೆಯ ಅಗತ್ಯತೆಗಳಿಗೆ ಸ್ಥಳೀಯ ವ್ಯವಹಾರಗಳು ಹಾಗೂ ಸಮುದಾಯ ಸಂಸ್ಥೆಗಳ ಸಂಪರ್ಕ ಬೆಸೆಯುವುದನ್ನೂ ಒಳಗೊಂಡಿದೆ. ವಿದ್ಯಾರ್ಥಿಗಳಿಂದ ಕ್ಷೇತ್ರ ಭೇಟಿ ಮತ್ತು ತಜ್ಞರು ಮತ್ತು ಪರಿಣಿತರಿಂದ ಶಾಲಾ ಭೇಟಿ ಈ ಎರಡೂ ಪ್ರಕ್ರಿಯೆಗಳು ಯಾವ ವಿಧಾನದಲ್ಲಿ ಕಲಿಕೆಯನ್ನು ಸಾಧಿಸಬಹುದು ಎಂಬುದಕ್ಕೆ ಉದಾಹರಣೆಗಳು.

ಕೋಷ್ಟಕ 1 ರಲ್ಲಿ ಕೊಟ್ಟಿರುವ ಉದಾಹರಣೆಯಂತೆ, ಒಂದು ಶಾಲೆ ತನ್ನ ಸ್ಕೂಲ್ ಕ್ಯಾಲೆಂಡರ್ ಮತ್ತು ಪಠ್ಯಕ್ರಮಗಳಿಗೆ ಸಂಬಂಧಿಸಿದಂತೆ ತನ್ನ ಭಾಗೀದಾರರನ್ನು ಹೇಗೆ ನಕ್ಷೀಕರಿಸಿದೆ ಎಂಬುದನ್ನು ತೋರಿಸುತ್ತದೆ.

***ಕೋಷ್ಟಕ 1** ಏಳನೇ ತರಗತಿಯು ಸಮುದಾಯ ಸಹಭಾಗಿತ್ವ ಸ್ಥಾಪಿಸಿರುವುದಕ್ಕೆ ಒಂದು ಉದಾಹರಣೆ.*

| ವಿಷಯ | ಉಪವಿಷಯ | ಸಂಸ್ಥೆ | ಸಂಪರ್ಕಿಸಬಹುದಾದ ವ್ಯಕ್ತಿ | ಉದ್ದೇಶ | ತಿಂಗಳು |
|---|---|---|---|---|---|
| ಭೂಗೋಳ | ಮಣ್ಣು | ರೈತ ಸಹಕಾರ ಸಂಘಗಳು | ಶ್ರೀಮತಿ ಗುಪ್ತಾ | ಮಣ್ಣಿನ ವಿಧಗಳು ಮತ್ತು ಅವುಗಳನ್ನು ಗುರುತಿಸುವ ಬಗೆ | ಜುಲೈ ಸಂದರ್ಶಕರು |
| ಪೌರನೀತಿ | ಸ್ಥಳೀಯ ಆಡಳಿತ | ಪಂಚಾಯಿತಿ | ಶ್ರೀಮತಿ ಚಕ್ರಬಾತಿ | ಪಂಚಾಯಿತಿಯ ಜವಾಬ್ದಾರಿಗಳನ್ನು ಹೇಳಲು ಸಾಧ್ಯವಾಗುವುದು. | ಆಗಸ್ಟ್ ಸಂದರ್ಶಕರು |
| ವಿಜ್ಞಾನ | ಶಬ್ಧ | ಉಪಕರಣಗಳನ್ನು ತಯಾರಿಸುವವರ ಕಾರ್ಖಾನೆ | ಶ್ರೀಯುತ ಜಾವೀದ್ | ತಂತಿಯನ್ನು ಬಳಸಿ ಒಂದು ಉಪಕರಣವನ್ನು ತಯಾರಿಸುವುದು | ಸೆಪ್ಟಂಬರ್ ಸಂದರ್ಶಕರು |
| ಇಂಗ್ಲೀಷ್ | ಪತ್ರ ಬರವಣಿಗೆ | ಅಂಚೆ ಕಛೇರಿ | ಶ್ರೀಯುತ ಚಾನಾ | ಪತ್ರ ಬರೆಯಲು ನಿಯಮಗಳು ಮತ್ತು ಪಿನ್ ಕೋಡ್‌ಗಳು | ಅಕ್ಟೋಬರ್ ಸಂದರ್ಶಕರು |
| ಇತಿಹಾಸ | ಐತಿಹಾಸಿಕ ಸ್ಥಳಗಳು | ಡೆಲ್ಲಿ ಸುಲ್ತಾನೇಟ್ | ಶ್ರೀಯುತ ತಾಪಾ | ಆಕೃತಿಗಳಲ್ಲಿ ಬಳಸಿರುವ ವಸ್ತುಗಳು, ಇದು ಎಲ್ಲಿಂದ ಬಂದಿದೆ ಮತ್ತು ಇದರ ರಚನೆಯ ಶೈಲಿಯನ್ನು ಗುರುತಿಸುವುದು. | ಜನವರಿ ಸಂದರ್ಶಕರು |

ಈ ಕ್ಷೇತ್ರ ಭೇಟಿಗಳನ್ನು ಆಯೋಜಿಸುವುದು ಸುಲಭದ ಕೆಲಸವಲ್ಲ, ಏಕೆಂದರೆ ಇದರಲ್ಲಿ ಅನುಮತಿ ಪಡೆಯುವುದು, ಸಂಬಂಧಿಸಿದ ವ್ಯಕ್ತಿಗಳಿಗೆ ವಿಚಾರವನ್ನು ವಿವರಿಸುವುದು, ವಿದ್ಯಾರ್ಥಿಗಳನ್ನು ಆ ಸ್ಥಳಕ್ಕೆ ಸುರಕ್ಷಿತವಾಗಿ ಕರೆದುಕೊಂಡು ಹೋಗಿ ಹಿಂತಿರುಗುವುದು ಇವೆಲ್ಲವನ್ನೂ ಒಳಗೊಂಡಿರುತ್ತದೆ. ಪ್ರವಾಸಗಳನ್ನು ಏರ್ಪಡಿಸಲು ನಿಮ್ಮ ಶಿಕ್ಷಕರಿಗೆ ನಿಮ್ಮ ಬೆಂಬಲ ಮತ್ತು ಪ್ರೋತ್ಸಾಹದ ಅಗತ್ಯವಿರುತ್ತದೆ. ಒಂದು ವೇಳೆ ನೀವು ಹೆಚ್ಚಿನ ದೂರ ಕ್ರಮಿಸಬೇಕೆಂದಲ್ಲಿ, ನಿಮಗೆ ಬೆಂಬಲ ಬೇಕೆನಿಸಿದಲ್ಲಿ ಎಸ್.ಡಿ.ಎಂ.ಸಿ ಮತ್ತು ವಿದ್ಯಾರ್ಥಿಗಳ ಪೋಷಕರು ನಿಮಗೆ ಸೂಕ್ತ ಸಂಪನ್ಮೂಲ ಎಂಬುದನ್ನು ಗಮನದಲ್ಲಿರಿಸಿ ಮತ್ತು ಈ ಸಂಧರ್ಭದಲ್ಲಿ ವಿದ್ಯಾರ್ಥಿ ಮತ್ತು ವಯಸ್ಕರ ಅನುಪಾತ ಸಮರ್ಪಕವಾಗಿರಲಿ.

ಒಬ್ಬ ಶಾಲಾ ನಾಯಕರಾಗಿ ನಿಮ್ಮ ಜಬಾಬ್ದಾರಿಗಳು:

- ನಿಮ್ಮ ಶಾಲೆಗಳೊಂದಿಗೆ ಸಮುದಾಯ ಸಂಸ್ಥೆಗಳು ತೊಡಗಿಕೊಳ್ಳುವುದನ್ನು ಪ್ರೋತ್ಸಾಹಿಸುವುದು
- ಸೂಕ್ತ ವಾದ ಕಾರ್ಯ ವೈಖರಿಗಳನ್ನು ರಚಿಸುವುದು
- ಉಸ್ತುವಾರಿ ಮತ್ತು ಪರಿಣಾಮಗಳ ಮೌಲ್ಯಮಾಪನ.

ಯಾವುದೇ ಒಂದು ಪಾಲುದಾರಿಕೆಯನ್ನು ಮೊದಲು ಎಸ್.ಎಂ.ಸಿ.ಗೆ ಶಿಫಾರಸು ಮಾಡಬೇಕು ಮತ್ತು ಅದರ, ಪರಿಣಾಮಕಾರಿತ್ವದ ಬಗೆಗೆ ಕೂಡ ಸತತವಾಗಿ ವರದಿ ನೀಡಬೇಕು, ಇದರಿಂದ ಈ ಪಾಲುದಾರಿಕೆಯು ಶಾಲೆ ಪರಿಣಾಮಕಾರಿಯಾಗಿ ನಡೆಯಲು ಯಾವ ರೀತಿ ಲಾಭದಾಯಕ ಎಂಬುದನ್ನು ಖಚಿತಪಡಿಸಲಾಗುವುದು.

## ಚಟುವಟಿಕೆ 4: ವಿಜ್ಞಾನ ಚಟುವಟಿಕೆ ಕೇಂದ್ರಕ್ಕೆ ಕ್ಷೇತ್ರ ಭೇಟಿ

ಒಂಭತ್ತನೇ ತರಗತಿಯ ವಿದ್ಯಾರ್ಥಿಗಳನ್ನು ಹಲವು ದಿನಗಳು ನಡೆಸಲಾಗುವ ಒಂದು ವಿಜ್ಞಾನ ಚಟುವಟಿಕಾ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಅವರಲ್ಲಿ ಒಬ್ಬ ವಿದ್ಯಾರ್ಥಿಯು ಶಾಲಾ ಬ್ಲಾಗ್ (ಮೇಘಾ, 2014) ಗೆ ನೀಡಿದ ಬರವಣಿಗೆಯನ್ನು ನೀವಿಲ್ಲಿ ಓದಬಹುದು.



**ಚಿತ್ರ 3** ಕ್ಷೇತ್ರ ಭೇಟಿಯ ಕುರಿತು ಒಂದು ವಿವರಣೆ.

ನಾವು ಬಂಗಾರಪೇಟೆಯನ್ನು ತಲುಪ ಬೇಕಾಗಿತ್ತು. ಇದು ಕುಪ್ಪಂಗೆ ನಮ್ಮ ಎರಡನೆಯ ಮತ್ತು ಕೊನೆಯ ಭೇಟಿಯಾಗಿತ್ತು. ನಾವು ಎಂಟನೇ ತರಗತಿಯಲ್ಲಿರುವಾಗ ಪ್ರಥಮ ಭೇಟಿ ನೀಡಿದ್ದೆವು. ಆಶ್ಚರ್ಯವೆಂದರೆ, ಈ ಬಾರಿ ಕುಪ್ಪಂನಲ್ಲಿ ನಮ್ಮ ಎಲ್ಲಾ ಅನುಭವಗಳೂ ವಿಭಿನ್ನವಾಗಿದ್ದವು. ಎಲ್ಲಾ ಸಿದ್ಧತೆಗಳು ಬಹಳ ಚೆನ್ನಾಗಿ ಸಂಯೋಜಿಸದ್ದರು ಮತ್ತು ನಾವು ತುಂಬಾ ಆರಾಮವಾಗಿ ಇದ್ದೆವು.

ಈ ಪ್ರವಾಸದಲ್ಲಿ ವಿಜ್ಞಾನದ ಭಾಗವು ತುಂಬಾ ಅದ್ಭುತವಾಗಿತ್ತು ಮತ್ತು ವಿಜ್ಞಾನವೆಂಬ ಸುಂದರ ಪ್ರಪಂಚದಲ್ಲಿ ನಮಗೆ ಸ್ವತಂತ್ರ ಹುಡುಕಾಟ ಮತ್ತು ಯೋಜನಾಧಾರಿತ ಕಲಿಕೆಯ ಅನುಭವವಾಗಿತ್ತು. ಯೋಜನಾ ಆಧಾರಿತ ಕಲಿಕೆ ಒಂದು ಹೊಸ ಅನುಭವವಾಗಿತ್ತು ಇದು ಪ್ರಯೋಗಗಳ ಮೂಲಕ ಪೂರ್ವಜ್ಞಾನಕ್ಕೆ ಬದಲಾವಣೆಗಳನ್ನು ಸೇರಿಸಲು ಮತ್ತು ಆ ಜ್ಞಾನವನ್ನು ಖಚಿತಪಡಿಸಿಕೊಳ್ಳಲು ಮಕ್ಕಳು ಚಾಲಿತ ಪ್ರಶ್ನೆಗಳನ್ನು ಕೇಳುವಂತೆ ಮಾಡಿತ್ತು. ಇದು ನಾನು ವಿಜ್ಞಾನವನ್ನು ನೋಡುವ ನನ್ನ ದೃಷ್ಟಿಯನ್ನೇ ಬದಲಾಯಿಸಿತ್ತು. ಮತ್ತು ಪುಟ್ಟ ವಿಜ್ಞಾನಗಳ ರೀತಿಯಲ್ಲಿ ಉನ್ನತ ತಂತ್ರಜ್ಞಾನದಿಂದ ತಯಾರಾದ ಪ್ರಯೋಗಾಯಲದ ಪರಿಕರಗಳನ್ನು ಬಳಸಿದ್ದು ನಮಗೆ ಮರೆಯಲಾರದ ಸಂಗತಿಯಾಗಿದೆ.

ಈ ಫೌಂಡೇಷನ್ ನಮಗೆ ಉತ್ತಮ ವ್ಯವಸ್ಥೆ ಮಾಡಿದ್ದರು. ನಾವು ಅಲ್ಲಿ ಸುಮಾರು 6 ದಿನ ತಂಗಿದ್ದೆವು, ಮತ್ತು ಭೌತಶಾಸ್ತ್ರ, ಗಣಿತ, ಜೀವಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳ ಪ್ರಯೋಗಗಳನ್ನು ಮಾಡಿದೆವು. ನುರಿತ ಗೌರವಾನ್ವಿತ ಪ್ರೊಫೆಸರ್ಗಳು ಅಧಿವೇಶನಗಳನ್ನು ನಡೆಸಿದ್ದುದರಿಂದ ವಿಜ್ಞಾನದ ಕುರಿತು ನಮ್ಮ ಜ್ಞಾನವನ್ನು ಗಟ್ಟಿಗೊಳಿಸಿತ್ತು. ಫೌಂಡೇಷನ್ ತನ್ನದೇ ಆಧ ಡಿಸ್ಕವರಿ ಸೆಂಟರ್ ಮತ್ತು ಡೋಂ ಥಿಯೇಟರ್‌ಗಳನ್ನು ಹೊಂದಿದೆ, ಇಲ್ಲಿ ನಾವು ಬಾಹ್ಯಾಕಾಶದ ಬಗೆಗೆ ಕಿರು ಚಿತ್ರಗಳನ್ನು ವೀಕ್ಷಿಸಿದೆವು.

ನಮ್ಮ ಪ್ರವಾಸದ ಉತ್ತಮ ಭಾಗ ಸಮುದಾಯಕ್ಕೆ ಭೇಟಿ ನೀಡಿದ್ದು, ಅಲ್ಲಿ ನಾವು ಸ್ಥಳೀಯ ಶಾಲೆಗಳಿಗೆ ಭೇಟಿ ನೀಡಿ ವಾಸ್ತವವಾಗಿ ಗ್ರಾಮೀಣ ಭಾಗದ ಶಿಕ್ಷಣ ಪದ್ಧತಿಗಳನ್ನು ಅರಿಯಲು ಸಾಧ್ಯವಾಯಿತು. ಅಲ್ಲಿನ ಮಕ್ಕಳು ನಾವು ಕನಸಿನಲ್ಲು ಎಣಿಸದಂಥಹ ಜಾಣರು ಮತ್ತು ಪ್ರತಿಭಾವಂತರು. ಅವರನ್ನು ಭೇಟಿಯಾಗುದ್ದು ನಮಗೆ ಹೆಮ್ಮೆಯ ವಿಷಯ. ಅವರೊಂದಿಗೆ ನಾವು ಕೆಲವು ಆಟಗಳನ್ನೂ ಆಡಿದೆವು.

ಹಾಗೂ ಕಲ್ಲಿನ ಕ್ವಾರಿಗೆ ಭೇಟಿ ನೀಟಿದ ಅಮೂಲ್ಯ ಕ್ಷಣಗಳನ್ನು ಮರೆಯಲಾರೆವು, ಪುರಾತನ ಕುಪ್ಪಂ ಕೋಟೆಯ ಬೆಟ್ಟದ ತುದಿಯನ್ನು ತಲುಪುವ ಪಯಣ ಪ್ರಾಯಾಸದಾಯಕವಗಿದ್ದರೂ ಸಹ ತೃಪ್ತಿದಾಯಕವಾಗಿತ್ತು ಮತ್ತು ನಮಗಾಗಿ ಸಾಂಸ್ಕೃತಿಕ ಸಂಜೆಯನ್ನು ಏರ್ಪಡಿಸಿದ್ದರು ಅಲ್ಲಿ ನಾವು ನೃತ್ಯ, ಹಾಡು ಗಳನ್ನು ಹಾಡಿದೆವು ಮತ್ತು ಹಲವು ಸಂಗೀತ ವಾದ್ಯಗಳನ್ನು ನುಡಿಸಿದೆವು. ಸಂತಸ ಮತ್ತು ಕಲಿಕೆ ಎರಡೂ ಸಹ ನಮಗೆ ವಿವಿಧ ಮಾರ್ಗಗಳಲ್ಲಿ ಉಂಟಾಗುತ್ತವೆ ಹಾಗೂ ಅರ್ಥೈಸಿಕೊಳ್ಳುವುದರಿಂದ ಉಂಟಾಗುವ ಕಲಿಕೆಯೇ ಅತ್ಯುತ್ತಮ ಎಂದು ತಿಳಿಸುತ್ತಾ ಮುಕ್ತಾಯ ಹಾಡಲು ಬಯಸುತ್ತೇನೆ.

ಈಗ ನೀವು, ಮಕ್ಕಳನ್ನು ಫೌಂಡೇಶನ್ ಗೆ ಕಳುಹಿಸುವ ಮೊದಲು ಈ ಪ್ರವಾಸ ಯಶಸ್ವಿಯಾಗಲು ಶಾಲಾ ನಾಯಕರು ಮತ್ತು ವಿಜ್ಞಾನ ಶಿಕ್ಷಕರು ಫೌಂಡೇಶನ್ ನವರೊಂದಿಗೆ ೦ಯಾವ ರೀತಿಯ ಚರ್ಚೆ ನಡೆಸಿರಬಹುದೆಂದು ನೀವು ಭಾವಿಸುವಿರೋ ಅದನ್ನು ನಿಮ್ಮ ಕಲಿಕಾ ದಿನಚರಿಯಲ್ಲಿ ದಾಖಲಿಸಿ. ಹಾಗೂ ಮಕ್ಕಳ ಕಲಿಕೆಗೆ ಸಂಬಂಧಿಸಿದಂತೆ ಈ ಪ್ರವಾಸದಲ್ಲಿ ಏನನ್ನು ಸಾಧಿಸಲಾಯಿತು ಎಂಬುದನ್ನೂ ಸಹ ಬರೆಯಿರಿ.

**ಚರ್ಚೆ**

ಶಾಲಾ ನಾಯಕರು ಮತ್ತು ವಿಜ್ಞಾನ ಶಿಕ್ಷಕರು ಫೌಂಡೇಶನ್ ನವರೊಂದಿಗೆ ಚರ್ಚಿಸಿರಬಹುದಾದ ವಿಚಾರಗಳ ಕುರಿತು ನೀವು ತಯಾರಿಸುವ ಪಟ್ಟಿಯು ಬಹುಶಃ ಈ ಕೆಳಗಿನವುಗಳನ್ನು ಒಳಗೊಂಡಿರಬಹುದು:

- ಪ್ರವಾಸದ ದಿನಾಂಖಗಳು
- ಎಷ್ಟು ಮಕ್ಕಳಿಗೆ ವ್ಯವಸ್ಥೆ ಒದಗಿಸಲಾಗುವುದು
- ಪ್ರಯಾಣ
- ತಂಗಲು ವ್ಯವಸ್ಥೆ
- ಹಣಕಾಸು
- ದಿನನಿತ್ಯದ ಕಾರ್ಯಕ್ರಮಗಳು
- ಸಂಪನ್ಮೂಲ ವ್ಯಕ್ತಿಗಳಯ
- ಊಟದ ವ್ಯವಸ್ಥೆ
- ಸುರಕ್ಷತೆ
- ಹೆಚ್ಚುವರಿ ಚಟುವಟಿಕೆಗಳು
- ವೈದ್ಯಕೀಯ ಸೌಲಭ್ಯಗಳು
- ಪಠ್ಯಕ್ರಮ

ಶಾಲಾ ನಾಯಕರು ಪೋಷಕರೊಂದಿಗೂ ಸಹ ಚರ್ಚಿಸಲು ಬಯಸುವ ಇಚ್ಛಿಸುವ ವಿಷಯಗಳ ಪಟ್ಟಿಯಲ್ಲಿ ಈ ಕೆಳಗಿನವುಗಳನ್ನು ಒಳಗೊಂಡಿರಬಹುದು:

- ಕ್ಷೇತ್ರ ಪ್ರವಾಸದ ಉದ್ದೇಶದ ಕುರಿತು ಮಾಹಿತಿ
- ಅವರಿಂದ ಸಮ್ಮತಿ ಪತ್ರ
- ಒಂದು ವೇಳೆ ವೈದ್ಯಕೀಯ ಗಮನ ಮತ್ತು ಆಹಾರ ಪದ್ಧತಿಯ ಅಗತ್ಯಗಳೇನಾದರೂ ಇದ್ದಲ್ಲಿ ಅವುಗಳ ಬಗ್ಗೆ ಮಾಹಿತಿ
- ಮಕ್ಕಳು ತಮ್ಮೊಂದಿಗೆ ತೆಗೆದುಕೊಂಡು ಹೋಗಬೇಕಾಗುವ ವಸ್ತುಗಳ ಪಟ್ಟಿ
- ಮಕ್ಕಳನ್ನು ಮನೆಯಿಂದ ಕರೆತಂದು ಬಿಡುವ ಮತ್ತು ಮನೆಗೆ ಕರೆದುಕೊಂಡು ಹೋಗಬೇಕಾದ ದಿನಾಂಖ ಮತ್ತು ಸಮಯ

ಇದರೊಂದಿಗೆ ಪ್ರವಾಸಕ್ಕೆ ತೆರಳುವ ಶಿಕ್ಷಕರೊಂದಿಗೆ ಚರ್ಚಿಸಬೇಕಾದ ಮಾಹಿತಿಗಳ ಪಟ್ಟಿಯೂ ಸಹ ಇರಬಹುದು.

## ಚಟುವಟಿಕೆ 5: ಪ್ರಸ್ತುತ ನಿಮ್ಮ ಸಮುದಾಯದೊಂದಿಗಿನ ನಿಮ್ಮ ಸಹಭಾಗಿತ್ವದ ಮೌಲ್ಯಮಾಪನ

ಈಗ ನಿಮ್ಮ ಶಾಲೆಯೊಂದಿಗೆ ಕೈ ಜೋಡಿಸಿರುವ ಸಮುದಾಯದ ಪಾಲುದಾರರನ್ನು ನೀವು ಪರೀಕ್ಷಿಸಬೇಕು. ಸ್ಥಳೀಯ ವ್ಯವಹಾರಗಳೊಂದಿಗೆ ನಿಮ್ಮ ಈ ಪಾಲುದಾರಿಕೆ ಸಣ್ಣ ಪ್ರಮಾಣದ್ದೇ ಆಗಿರಬಹುದು ಅಥವಾ ಸೌಲಭ್ಯಗಳನ್ನು ಹಂಚಿಕೊಂಡ ಎನ್.ಜಿ.ಓ.ದೊಂದಿಗೆ ದೊಡ್ಡ ಪ್ರಮಾಣದ ಪಾಲುದಾರಿಕೆ ಆಗಿರಲೂ ಬಹುದು. ಚಿತ್ರ 4 ರಲ್ಲಿ ನೀಡಿರುವ ಸೂಚನೆಗಳನ್ನು ಗಮನಿಸಿ, ಈ ಪಾಲುದಾರಿಕೆ ವಿದ್ಯಾರ್ಥಿಗಳ ಮೇಲೆ ಬೀರಿರುವ ಪರಿಣಾಮವನ್ನು ಮೌಲ್ಯಮಾಪನ ಮಾಡಿ ಮತ್ತು ಈ ಪಾಲುದಾರಿಕೆಯಿಂದ ಇನ್ನೂ ಹೆಚ್ಚಿನ ಪ್ರಯೋಜನವಾಗುತ್ತದೆಯೇ ಎಂದು ಆಲೋಚಿಸಿ.

ಸ್ವಾಟ್ (ಸಾಮರ್ಥ್ಯಗಳು, ದೌರ್ಬಲ್ಯಗಳು, ಅವಕಾಶಗಳು ಮತ್ತು ಸವಾಲು) ಗಳನ್ನು ಬಳಸಿ ನಿಮ್ಮ ಕಲಿಕಾ ದಿನಚರಿಯಲ್ಲಿ ಚಿತ್ರ 4 ರಲ್ಲಿ ತೋರಿಸಿರುವಂತೆ ಟಿಪ್ಪಣಿ ಬರೆದುಕೊಳ್ಳಿ. ಈ ಮೌಲ್ಯಮಾಪನದಲ್ಲಿ ಸಿಬ್ಬಂದಿಗಳು, ತಂದೆತಾಯಿಯರು ಹಾಗೂ ಪಾಲುದಾರರನ್ನು ತೊಡಗಿಸಿಕೊಳ್ಳಲು ಇಚ್ಛಿಸಬಹುದು.

| | |
|---|---|
| **ಸಾಮರ್ಥ್ಯಗಳು**<br>ವಿದ್ಯಾರ್ಥಿಗಳ ಕಲಿಕೆಗೆ ಪರಿಣಾಮ ಬೀರುವಂಥಹ ಅಂಶಗಳನ್ನು ಪರಿಗಣಿಸಿ ಸಹಭಾಗಿತ್ವದಿಂದಾಗುವ ಎಲ್ಲಾ ಸಕಾರಾತ್ಮಕ ಅಂಶಗಳನ್ನೂ ಪಟ್ಟಿ ಮಾಡಿ | **ದೌರ್ಬಲ್ಯಗಳು**<br>ಈ ಸಹಭಾಗಿತ್ವದಿಂದ ಅಡಚಣೆ ಉಂಟುಮಡುತ್ತಿರುವ ಅಂಶಗಳನ್ನು ಪಟ್ಟಿಮಾಡಿ. |
| **ಅವಕಾಶಗಳು**<br>ವಿದ್ಯಾರ್ಥಿ ಕಲಿಕೆಯನ್ನು ನಿರ್ದಿಷ್ಟವಾಗಿ ಆಲೋಚಿಸಿ, ಈಗ ನಡೆಯದೇ ಇದ್ದರೂ ಮುಂದೆ ಸಂಭವಿಸಬಹುದಾದ ವಿಷಯಗಳನ್ನು ಪಟ್ಟಿ ಮಾಡಿ | **ಆತಂಕಗಳು**<br>ಸಹಭಾಗಿತ್ವಕ್ಕೆ ಸವಾಲಾಗಿರುವ/ಆತಂಕ ತರಿಸುವಂಥಹ ವಿಚಾರಗಳನ್ನು ಪಟ್ಟಿ ಮಾಡಿ. |

**ಚಿತ್ರ 4** ಶಾಲೆ ಮತ್ತು ಸಮುದಾಯದ ನಡುವೆ ಇರುವ ಪಾಲುದಾರಿಕೆಯನ್ನು ಮೌಲ್ಯಮಾಪನ ಮಾಡುವಂಥಹ ಸ್ವಾಟ್ ಗ್ರಿಡ್

**ಚರ್ಚೆ**

ಪಾಲುದಾರಿಕೆಯಲ್ಲಿ ಯಾವುದು ಪ್ರಾಯೋಗಿಕ ಹಾಗೂ ಯವುದರಲ್ಲಿ ಅಭಿವೃದ್ದಿ ಹೊಂದಬೇಕು ಎಂಬುದನ್ನು ವಿಶ್ಲೇಷಿಸುವಲ್ಲಿ ಈ ಸರಳ ಗ್ರಿಡ್ ಸಹಕಾರಿಯಾಗುತ್ತದೆ. ಈ ಘಟಕದ ಹೆಚ್ಚುವರಿ ಸಂಪನ್ಮೂಲ ವಿಭಾಗದಲ್ಲಿ ಸ್ವಾಟ್ ನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಯಬಹುದು.

- ವಿದ್ಯಾರ್ಥಿ ಕಲಿಕೆಗೆ ಪೂರಕವಾದಂಥಹ ಸಹಭಾಗಿತ್ವದಲ್ಲಿ ಯಾವ ಯಾವ ವಲಯಗಳಲ್ಲಿ ಪರಿಣಾಮಕಾರಿತ್ವವನ್ನು ಹೆಚ್ಚಿಸ ಬಹುದು ಎಂಬುದನ್ನು ಗುರುತಿಸುವಲ್ಲಿ, ಈ ಗ್ರಿಡ್ ನಿಮಗೆ ಪ್ರಯೋಜನಕಾರಿಯಾಗಿದೆಯೇ? ಇದು ನಿಮಗೆ ಕೆಲ ಆದ್ಯತೆಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಹಾಗೂ ಎಸ್.ಎಂ.ಸಿ ಗೆ ಕೆಲವು ಶಿಫಾರಸ್ಸುಗಳನ್ನು ತಯಾರಿ ಮಾಡಲು ಸಾಧ್ಯವಾಗುತ್ತದೆ.
- ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸುವುದಕ್ಕೂ ಮುನ್ನ, ಈ ಗ್ರಿಡ್ ಅನ್ನು ಎಸ್.ಎಂ.ಸಿ.ಯೊಂದಿಗೆ ಉಪಯೋಗಿಸಬಹುದು ಎಂದು ನಿಮಗೆ ಅನಿಸುತ್ತದೆಯೇ? ಒಂದು ವೇಳೆ ಇದು, ಪ್ರಮುಖ ಕಾರ್ಯಗಳನ್ನು ಸುಲಭವಾಗಿ ಮುಂದುವರಿಸಲು ಹಾಗೂ ಶಾಲೆಯ ಆದ್ಯತೆಗಳ ಬಗ್ಗೆ ಎಸ್.ಎಂ.ಸಿ.ಗೆ ಮನವರಿಕೆ ಮಾಡಲು ಸಹಾಯವಾಗಿದೆ.

# 4 ವಿದ್ಯಾರ್ಥಿಗಳ ತಂದೆತಾಯಂದಿರು ಮತ್ತು ಪೋಷಕರನ್ನು ತೊಡಗಿಸಿಕೊಳ್ಳುವುದು

ಶಾಲೆಯಲ್ಲಿ ನೀಡಲಾಗುತ್ತಿರುವ ಶಿಕ್ಷಣ ನೇರವಾಗಿ ಮಕ್ಕಳ ಜೀವನದ ಪ್ರಗತಿಯ ಮೇಲೆ ಪರಿಣಾಮ ಬೀರುವುದರಿಂದ, ವಿದ್ಯಾರ್ಥಿಗಳ ತಂದೆತಾಯಿಯರು ಹಾಗೂ ಪೋಷಕರು ಸಹಜವಾಗಿ ಪಾಲುದಾರರಾಗುತ್ತಾರೆ. ಶಾಲೆಗಳು ಹಾಗೂ ತಂದೆತಾಯಂದಿರು, ಪಾಲುದಾರರಾಗಿ ಕೆಲಸ ನಿರ್ವಹಿಸುವಾಗ ವಿದ್ಯಾರ್ಥಿಗಳು ಅದರಿಂದ ಪ್ರಯೋಜನ ಪಡೆಯುತ್ತಾರೆ ಹಾಗೂ ಹೆಚ್ಚಿನ ಯಶಸ್ಸನ್ನು ಕಾಣುವ ಸಾಧ್ಯತೆಯಿದೆ. ತಂದೆ ತಾಯಂದಿರು ಹಾಗೂ ಪೋಷಕರು ಹೆಚ್ಚು ಬೇಡಿಕೆಯೊಡ್ಡುವವರಾಗಿರುತ್ತಾರೆ, ಆದರೆ, ಆ ಬಾಂಧವ್ಯವನ್ನು ನೀವು ಸಮರ್ಪಕವಾಗಿ ನಿರ್ವಹಿಸುವಾಗ ಅವರು ನಿಮಗೆ ಹೆಚ್ಚಿನ ಸಹಕಾರ ನೀಡುತ್ತಾರೆ. ಶಾಲಾ ನಾಯಕರ ಪಾತ್ರವೇನೆಂದರೆ, ತಂದೆ ತಾಯಂದಿರನ್ನು ತೊಡಗಿಸಿಕೊಳ್ಳಲು ಹೆಚ್ಚು ಮಾರ್ಗಗಳನ್ನು ಹುಡುಕುವುದು. ಇದರಿಂದ, ಅವರ ಮಕ್ಕಳಿಗಾಗಿ ಸಾಧ್ಯವಾದ ಎಲ್ಲಾ ರೀತಿಯಲ್ಲೂ ಶಾಲೆಗೆ ಬೆಂಬಲ ನೀಡಿ, ಶಾಲೆಯಲ್ಲಿ ನಡೆಯುತ್ತಿರುವ ಕಾರ್ಯಗಳನ್ನು ಕ್ಷಿಪ್ರಗೊಳಿಸಲು ತಂದೆತಾಯಂದಿರನ್ನು ತೊಡಗಿಸಿಕೊಳ್ಳಲು ಮಾರ್ಗಗಳನ್ನು ಕಂಡುಕೊಳ್ಳಬೇಕಾಗುತ್ತದೆ.

ಮಕ್ಕಳ ಕಲಿಕೆಯಲ್ಲಿ ಮತ್ತು ಶೈಕ್ಷಣಿಕ ಪ್ರಗತಿಯಲ್ಲಿ ತಂದೆ ತಾಯಿಯರನ್ನು ತೊಡಗಿಸಿಕೊಳ್ಳುವಲ್ಲಿ ನೀವು ಆಸಕ್ತಿ ಹೊಂದಿದ್ದರೆ, ಅವರಿಗೆ ಶಾಲೆ ಎಂಬುದು ಅವರನ್ನು ಗೌರವಿಸುವ ಹಾಗೂ ಅವರಿಗೆ ಮಾನ್ಯತೆ ನೀಡುವ ಸ್ವಾಗತಿಸುವ ತಾಣವೆಂಬ ಮನೋಭಾವ ಅವರಲ್ಲಿ ಮೂಡುವಂತಿರಬೇಕು.

ವೀಡಿಯೋ: ಶಾಲಾ ನಾಯಕತ್ವ – ತಂದೆತಾಯಿಯರನ್ನು ತೊಡಿಸಿಕೊಳ್ಳುವುದು

ವೀಡಿಯೋ: ಶಾಲಾ ನಾಯಕತ್ವ – ವಿದ್ಯಾರ್ಥಿಗಳ ಹಿನ್ನಲೆಯನ್ನು ಅರಿಯುವುದು

## ಚಟುವಟಿಕೆ 6: ತಂದೆತಾಯಿಯರಲ್ಲಿ ಗೌರವ ಮತ್ತು ಸ್ವಾಗತಾರ್ಹ ಮನೋಭಾವ ಮೂಡುವಂತೆ ಮಾಡುವುದು

ಒಬ್ಬ ಹಿಂಜರಿಕೆ ಸ್ವಭಾವವಿರುವ ಶಿಕ್ಷಣದಿಂದ ವಂಚಿತ ತಂದೆಯ ಬಗ್ಗೆ ಆಲೋಚಿಸಿ, ಆತ ತನ್ನ 5 ಮಕ್ಕಳೂ ತನಗಿಂತ ವಿದ್ಯಾವಂತರಾಗಬೇಕು ಮತ್ತು ಬುದ್ಧಿವಂತರಾಗಬೇಕೆಂದು ಆಸಕ್ತಿ ತೋರುತ್ತಾನೆ. ಆತನ ಹೆಂಡತಿ ಸಾಧ್ವಿ ಮತ್ತು ಅವಳಿಗೆ ಕಿವಿ ಸರಿಯಾಗಿ ಕೇಳುವುದಿಲ್ಲ. ಇವರು ಒಟ್ಟು ಕುಟುಂಬದವರಾಗಿದ್ದು ಇವರ ಮಕ್ಕಳು ತಪ್ಪದೇ ಶಾಲೆಗೆ ಹೋಗುತ್ತಾರೆ. ತರಗತಿಯಲ್ಲಿ ಸರಿಯಾಗಿ ಆಲಿಸದೆ ಮತ್ತು ಸದಾ ಚೇಷ್ಟೆ ಮಾಡುವ ಕೊನೆಯ ಮಗುವನ್ನು ಹೊರತು ಪಡಿಸಿ ಉಳಿದವರೆಲ್ಲರಿಗೂ ಕಲಿಕೆಯ ಬಗ್ಗೆ ಸಕಾರಾತ್ಮಕ ಭಾವನೆ ಇದೆ.

- ಒಬ್ಬ ವ್ಯಕ್ತಿಯಾಗಿ ಅದಕ್ಕಿಂತಲೂ ಮಿಗಿಲಾಗಿ ಒಬ್ಬ ಶಾಲಾ ನಾಯಕರಾಗಿ,ಈ ರೀತಿಯ ಪೋಷಕರನ್ನು ಶಾಲೆಯ ಚಟುವಟಿಕೆಗಳಲ್ಲಿ ಹೇಗೆ ತೊಡಗಿಸಿಕೊಳ್ಳಬಹುದು?, ಹೀಗೆ ಮಾಡುವುದರಿಂದ ಅವರಿಗೆ ತಾವೂ ಶಾಲೆಯ ಒಂದು ಭಾಗ ಎಂಬ ಭಾವನೆ ಮೂಡುತ್ತದೆ.
- ನೀವು ಬಗೆಹರಿಸಬೇಕಾದ ಸಮಸ್ಯೆಗಳಾವುವು? ಮತ್ತು ಈ ಪೋಷಕರು ಎಷ್ಟರ ಮಟ್ಟಿಗೆ ತಾವು ಶಾಲಾ ಚಟುವಟಿಕೆಗಳಲ್ಲಿ ತೊಡಗಲು ಸ್ವಾಗತಾರ್ಹ ಮನೋಭಾವ ಹೊಂದಿದ್ದಾರೆ ಎಂದು ಹೇಗೆ ಕಂಡುಕೊಳ್ಳುವಿರಿ?

ಕಲಿಕಾ ದಿನಚರಿಯಲ್ಲಿ ನಿಮ್ಮ ಆಲೋಚನೆಗಳನ್ನು ಬರೆದಿಟ್ಟುಕೊಳ್ಳಿ.

**ಚರ್ಚೆ**

ತಂದೆ ತಾಯಿಯರು ತಮ್ಮ ಶಾಲಾ ಜೀವನದ ಸ್ವಅನುಭವವನ್ನು ತಮ್ಮ ವಯಸ್ಕ ಜೀವನಕ್ಕೂ ಸಂಬಂಧೀಕರಿಸಿಕೊಳ್ಳುತ್ತಾರೆ ಎನ್ನುವುದು ನಿಜ. ಇದು ಅವರ ಮಕ್ಕಳ ಶಿಕ್ಷಣಕ್ಕೆ ಎಷ್ಟರ ಮಟ್ಟಿಗೆ ಆದ್ಯತೆ ನೀಡುತ್ತಾರೆ ಮತ್ತು ಶಾಲೆಯೊಂದಿಗೆ ಹೇಗೆ ಬಾಂಧವ್ಯ ಬೆಸೆದುಕೊಳ್ಳುತ್ತಾರೆ ಎಂಬುದನ್ನು ಪ್ರಭಾವಿಸುತ್ತದೆ. ಶಿಕ್ಷಕರ ಬಗ್ಗೆ ಪ್ರಶಂಶಿಸುವುದು ಪೋಷಕರಿಗೆ ಸಾಮಾನ್ಯವಾದ ವಿಷಯ, ಹಾಗಾಗಿ ಇವರಿಗೆ ಶಿಕ್ಷಕರನ್ನು ಪ್ರಶ್ನಿಸುವುದಾಗಲೀ ಅಥವಾ ಅವರಿಗೆ ಸವಾಲಾಕುವುದಾಗಲೀ ಕಷ್ಟಕರವಾದ ವಿಚಾರ.

ಈ ಬಗೆಯ ತಂದೆ ತಾಯಂದಿರು ಅವರ ಮಕ್ಕಳ ಶಿಕ್ಷಣದಲ್ಲಿ ತುಂಬಾ ಆಸಕ್ತಿಯಿರುವ ವಿಚಾರ ಇದರಿಂದ ಶಿಕ್ಷಕರಿಗೆ ಅನುಕೂಲವಾಗುತ್ತದೆ.

ಅವರು ಶಾಲೆಗೆ ಬಂದಾಗ ಅವರನ್ನು ಮಾತನಾಡಿಸುವುದನ್ನು ನೀವು ಖಚಿತ ಪಡಿಸಿಕೊಳ್ಳಿ ಮತ್ತು ಕೆಲವೊಮ್ಮೆ ಅವರ ಮನೆಗೆ ಭೇಟಿ ನೀಡುವದೂ ಸಹ

ಅನುಕೂಲಕರವಾಗಿರುತ್ತದೆ. ಬಹುಶಃ ಆ ಸಮಯದಲ್ಲಿ ನೀವು ಅವರ ಕೊನೆಯ ಮಗುವಿನ ಕುರಿತು ಮಾತನಾಡಬಹುದು, ಆ ಮಗುವಿನ ಅಡಚಣೆ ಉಂಟುಮಾಡುವ ವರ್ತನೆ, ಇದಕ್ಕೆ ಕಾರಣ ಏನಿರಬಹುದೆಂದು ಅವರೊಂದಿಗೆ ಚರ್ಚಿಸುವುದು. ಈ ತಂದೆ ತಾಯಿಗಳು ವಿದ್ಯಾಭ್ಯಾಸ ಕಡಿಮೆಯಿರುವುದರಿಂದ, ನಿಮ್ಮ ಸಂಭಾಷಣೆ ಬರವಣಿಗೆಯ ಬದಲಾಗಿ ಹೆಚ್ಚಾಗಿ ನೇರವಾಗಿ ಮಾತನಾಡುವುದ ಮೂಲಕ ಇರಬೇಕು. ವಿಶೇಷವಾಗಿ ಆ ಮಗುವಿನ ತಾಯಿಯೊಂದಿಗೆ ಮಾತನಾಡುವುದು ಹೆಚ್ಚು ಸೂಕ್ತ; ತುಟಿಯ ಚಲನೆಯನ್ನು ಅರ್ಥೈಸಿಕೊಳ್ಳುವರಾದಲ್ಲಿ ನೀವು ಅವರ ಎದುರಿಗೆ ನಿಂತ ಮಾಡನಾಡಬೇಕು.

ಸಾಮಾನ್ಯವಾಗಿ ಹೇಳುವುದಾದರೆ, ಶಾಲೆಯಲ್ಲಿ ವಿಶೇಷದಿನಗಳಲ್ಲಿ ಉದಾ: ಶಾಲಾ ಪ್ರವಾಸ, ಆಟೋಟಗಳು, ಇತ್ಯಾದಿ. . . ದಿನಗಳಲ್ಲಿ ಅವರನ್ನು ಆಹ್ವಾನಿಸಿವುದು ಮತ್ತು ಅವರು ಆಗಮಿಸಿದಾಗ ಅವರನ್ನು ಅತಿಥಿಗಳಂತೆ ನೋಡಿಕೊಳ್ಳುವುದನ್ನು ಖಚಿತ ಪಡಿಸಿಕೊಳ್ಳಿ. ಅವರ ಮೇಲಿರುವ ನಿಮ್ಮ ವೈಯಕ್ತಿಕ ಆಸಕ್ತಿ ಹಾಗೂ ಗಮನ ಅವರಿಗೆ ಹೆಚ್ಚು ಆತ್ಮಸ್ಥೈರ್ಯ ಮತ್ತು ಶಾಲೆಯಲ್ಲಿ ಸ್ವಾಗತಾರ್ಹ ಮನೋಭಾವ ಮೂಡುತ್ತದೆ.

ನಿಮ್ಮ ಶಾಲೆಯಲ್ಲಿ ದಾಖಲಾಗಿರುವ ಮಕ್ಕಳ ತಂದೆ ತಾಯಿಯರನ್ನು ಸ್ವಲ್ಪ ಮಟ್ಟಿಗಾದರೂ ತೊಡಗಿಸಿಕೊಳ್ಳುವಂತಿರಬೇಕು. ಇದರಲ್ಲಿ ಕೆಲವು ಬಾಂಧವ್ಯಗಳು ಉತ್ಕೃಷ್ಟವಾಗಿರುತ್ತದೆ. ಶಾಲೆಯಲ್ಲಿ ನಡೆಸಲಾಗುವ ಎಲ್ಲಾ ಚಟುವಟಿಕೆಗಳಲ್ಲಿ ಎಲ್ಲಾ ತಂದೆ ತಾಯಿಯಂದಿರು ಸಂಪೂರ್ಣವಾಗಿ ಭಾಗವಹಿಸುತ್ತಿದ್ದಾರೆ ಎಂಬುದನ್ನು ತಿಳಿಯಲು ಹಾಗೂ ಇವರೆಲ್ಲರನ್ನೂ ಸಮಾನವಾಗಿ ಕಾಣುತ್ತಿರುವುದನ್ನು ಪರಿಶೀಲಿಸುವುದು.

## ಚಟುವಟಿಕೆ 7: ತಂದೆ ತಾಯಿಯರೊಂದಿಗೆ ನಿಮ್ಮ ಶಾಲೆಯ ತೊಡಗಿಕೊಳ್ಳುವಿಕೆಯನ್ನು ಪರಿಶೀಲಿಸುವುದು

ನಿಮ್ಮ ಶಾಲೆಯ ಕುರಿತು ಒಂದು ಕ್ಷಣ ಆಲೋಚಿಸಿ ಮತ್ತು ಕೋಷ್ಟಕ 2 ರಲ್ಲಿ ನೀಡಿರುವ ಹೇಳಿಕೆಗಳನ್ನು ಪರಿಗಣಿಸಿ, ಪ್ರತಿಯೊಂದಕ್ಕೂ 10 ಅಂಕಗಳಲ್ಲಿ ಸೂಕ್ತ ಸ್ಕೋರ್ ಗಳನ್ನು ನೀಡಿ (10 –ಸಂಪೂರ್ಣ ಒಪ್ಪಿಗೆ)

**ಕೋಷ್ಟಕ 2:** ತಂದೆ ತಾಯಿಯರೊಂದಿಗೆ ನಿಮ್ಮ ಶಾಲೆಯ ತೊಡಗಿಕೊಳ್ಳುವಿಕೆಯನ್ನು ಪರಿಶೀಲಿಸುವುದು

| **ಹೇಳಿಕೆಗಳು** | **10 ಅಂಕಗಳಲ್ಲಿ ಗಳಿಸಿದ ಸ್ಕೋರ್** |
|---|---|
| ಮಕ್ಕಳ ಪ್ರಗತಿಯ ಬಗ್ಗೆ ತಂದೆತಾಯಿಯರೊಂದಿಗೆ ಚರ್ಚಿಸಲು ಒಂದು ಟರ್ಮಿನಲ್ಲಿ ನನ್ನ ಶಾಲೆ ಕನಿಷ್ಟ ಒಂದು ಸಭೆಯನ್ನಾದರೂ ನಡೆಸುತ್ತದೆ. | |
| ಇಲ್ಲಿ ಧನ ಸಂಗ್ರಹಣೆಗೆ ಮಾತ್ರ ಸೀಮಿತವಾಗಿರದ ಒಂದು ಪೋಷಕ–ಶಿಕ್ಷಕರ ಸಕ್ರಿಯ ಸಂಘಟನೆ ಅಥವಾ ಇಂಥಹದೆ ಇತರೆ ಫೋರಂ ಇದೆ. | |
| ತಂದೆ ತಾಯಿಯರನ್ನು ಶಾಲೆಗೆ ಆಹ್ವಾನಿಸಲಾಗುವುದು ಮತ್ತು ಅವರ ವಿಷಯವಾರು ಶಿಕ್ಷಕರನ್ನು ಸಂಧಿಸಿ ಸೂಕ್ತ ಸ್ಥಳದೊಂದಿಗೆ, ಮಗುವಿನ ಪ್ರಗತಿ ಅಥವಾ ಸಮಸ್ಯೆಗಳ ಬಗ್ಗೆ ಚರ್ಚಿಸುವ ಸಾಧ್ಯತೆ | |
| ಪೋಷಕರಿಂದ ದೂರು ಬಂದಲ್ಲಿ (3 ದಿನಗಳೊಳಗಾಗಿ) ಶಾಲೆಯು ಅವರಿಗೆ ಪ್ರತಿಕ್ರಿಯಿಸಿರುತ್ತದೆ, | |
| ಎಸ್.ಎಂ.ಸಿಯ ಸದಸ್ಯರು ಪ್ರಸ್ತುತ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪೋಷಕರಾಗಿದ್ದಾರೆ. | |
| ಮನೆಯಲ್ಲಿ ಮಕ್ಕಳ ಓದಿಗೆ ಯಾವ ರೀತಿ ಬೆಂಬಲ ನೀಡಬೇಕೆಂಬುದರ ಕುರಿತು ತಂದೆ ತಾಯಂದಿರಿಗೆ ಸಲಹಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. | |
| ಪೋಷಕರು ಕೆಲವೊಮ್ಮೆ ತರಗತಿ ಕೋಣೆಗೆ ಭೇಟಿ ನೀಡಿ ತಮ್ಮ ಜ್ಞಾನ ಮತ್ತು ಕಲಿಕೆಯನ್ನು ಮಕ್ಕಳಿಗೆ ಕೊಡುಗೆಯಾಗಿ ನೀಡುತ್ತಾರೆ. | |
| ಶಾಲೆಯ ಶೈಕ್ಷಣಿಕ, ಸಾಮಾಜಿಕ ಹಾಗೂ ಸ್ಪರ್ಧೆಗಳಿಗೆ ಸಂಬಂಧಿಸಿದ ಮುಖ್ಯ ದಿನಗಳ ಕ್ಯಾಲೆಂಡರ್ ಪೋಷಕರ ಬಳಿ ಇದೆ. | |
| ವಿಶೇಷ ಅಸೆಂಬ್ಲಿಗಳಲ್ಲಿ, ಸಮಾರಂಭಗಳಲ್ಲಿ ಹೆಚ್ಚಿನ ಪೋಷಕರು ಭಾಗವಹಿಸುತ್ತಾರೆ. | |
| ಪೋಷಕರಲ್ಲಿನ ವೈವಿಧ್ಯತೆಯನ್ನು (ಸಾಕ್ಷರತೆ, ಭಾಷೆ, ಪೂರ್ವ ಶಿಕ್ಷಣ, ಲಭ್ಯತೆ, ಇತ್ಯಾದಿ) ಶಾಲೆ ಗುರುತಿಸುತ್ತದೆ ಮತ್ತು ಇವರೆಲ್ಲರನ್ನೂ ಭಾಗೀದಾರರನ್ನಾಗಿ ತೊಡಗಿಸಿಕೊಳ್ಳಲು ಬದ್ಧತೆ ಇದೆ. | |
| **ಮೊತ್ತ** | |

ನೀವು ರಚಿಸಿದ ಪಟ್ಟಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ.

- ನೀವು ಸುಲಭವಾಗಿ ಕೈಗೆತ್ತಿಕೊಳ್ಳಬಹುದಾದ ಇತರೆ ಚಟುವಟಿಕೆಗಳಿವೆಯೇ?
- ಯಾವ ಚಟುವಟಿಕೆಗಳು ನಿಮಗೆ ಹೆಚ್ಚು ಬದಲಾವಣೆಯನ್ನು ತರುತ್ತದೆ.
- ಯಾವ ಚಟುವಟಿಕೆಗಳಲ್ಲಿ ಪೋಷಕರು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಾರೆ?
- ಯಾವ ಯಾವ ಚಟುವಟಿಕೆಗಳು ನಿಮ್ಮ ಶಾಲೆಯ ಗುರಿಗಳನ್ನು ಹಾಗೂ ಅಭಿವೃದ್ಧಿ ಯೋಜನೆಗೆ ಹೆಚ್ಚು ಕೊಡುಗೆ ನೀಡುತ್ತವೆ. ನಿಮ್ಮ ಆಲೋಚನೆಗಳನ್ನು ನಿಮ್ಮ ಕಲಿಕಾ ದಿನಚರಿಯಲ್ಲಿ ದಾಖಲಿಸಿ. ಈ ಘಟಕದ ಕೊನೆಯಲ್ಲಿ ಇದನ್ನು ಮರುಪರಿಶೀಲಿಸಿ ಮುಂದಿನ ಟರ್ಮ್‌ಗೆ ಯೋಜನೆಯನ್ನು ರಚಿಸಲು ಸಹಕಾರಿಯಾಗಿತ್ತದೆ



**ಚಿತ್ರ 5** ನಿಮ್ಮ ವಿದ್ಯಾರ್ಥಿಯ ಪೋಷಕರೊಡನೆ ತೊಡಗಿಕೊಳ್ಳುವುದು ತೀರಾ ಅಗತ್ಯ.

ಕೇವಲ ಈ ವಿಧಾನಗಳಿಂದ ಮಾತ್ರವೇ ತಂದೆ ತಾಯಿಯರನ್ನು ಅವರ ಮಕ್ಕಳ ಶಾಲೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಆಗುವುದಿಲ್ಲ, ಲೆಕ್ಕಪರಿಶೋಧನೆಯು ಈ ಪ್ರಕ್ರಿಯೆಯನ್ನು ಉತ್ತಮ ಪಡಿಸಿಕೊಳ್ಳಲು ಹಲವು ಮಾರ್ಗೋಪಾಯಗಳನ್ನು ನೀಡಬಹುದು. ನಿಮ್ಮ ಸ್ಕೋರ್‌ಗಳನ್ನು ಕೂಡಿದಾಗ, ತಂದೆತಾಯಿಯರನ್ನು ಎಷ್ಟರ ಮಟ್ಟಿಗೆ ನಿಮ್ಮ ಶಾಲೆಯಲ್ಲಿ ತೊಡಗಿಸಿಕೊಂಡಿದ್ದೀರಿ ಎಂಬುದರ ಶೇಖಡಾವಾರು ಫಲಿತಾಂಶ ತಿಳಿಯುತ್ತದೆ.

ಶಾಲಾ ಜೀವನದಲ್ಲಿ ಪೋಷಕರನ್ನು ತೊಡಗಿಸಿಕೊಳ್ಳಲು ಇತರ ಹಲವಾರು ಮಾರ್ಗಗಳನ್ನು ಹುಡುಕಲು ನಿಮಗೆ ಈ ಲೆಕ್ಕ ಪರಿಶೋಧನೆ ಸಹಾಯ ಮಾಡುತ್ತದೆ. ಈ ನಿಟ್ಟಿನಲ್ಲಿ ನಿಮಗೆ ಹೊಳೆಯುವ ಯಾವುದೇ ಮಾರ್ಗೋಪಾಯಗಳನ್ನು ನಿಮ್ಮ ಕಲಿಕಾ ದಿನಚರಿಯಲ್ಲಿ ಬರೆದಿಟ್ಟುಕೊಳ್ಳಿ. ಚಟುವಟಿಕೆ 9 ರಲ್ಲಿ ನಿಮಗೆ ಈ ಲೆಕ್ಕಪರಿಶೋಧನೆಯನ್ನು ಮರುಪರಾಮರ್ಶಿಸಿ ಮುಂದಿನ ಅವಧಿಗೆ ಯೋಜನೆ ತಯಾರಿಸಲು ಅವಕಾಶ ನೀಡುತ್ತದೆ.

ಶಾಲೆಯ ಯಶಸ್ಸಿನಲ್ಲಿ ಪೋಷಕರು ಭಾಗೀದಾರಾಗಿ ತೊಡಗಿಕೊಂಡಾಗ, ಅವರು ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಮತ್ತು ಕಷ್ಟಕರ ಪರಿಸ್ಥಿತಿಯನ್ನು ನಿಭಾಯಿಸಲು ಸಹಕರಿಸುತ್ತಾರೆ. ಅವರೊಂದಿಗೆ ಚರ್ಚಿಸುವುದರಿಂದ ನೀವು ಅವರ ದೃಷ್ಟಿಕೋನದಲ್ಲಿ ಸಮಸ್ಯೆಗಳನ್ನು ನೋಡಲು ಹಾಗು ವಿದ್ಯಾರ್ಥಿಗಳ ಕಲಿಕೆಗೆ ಮತ್ತು ಪ್ರಗತಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

## ವ್ಯಕ್ತಿ ಅಧ್ಯಯನ 3: 8ನೇ ತರಗತಿಯನಂತರ ಶಾಲೆಯಿಂದ ಹೊರಗುಳಿಯುವ ಮಕ್ಕಳ ಕುರಿತು ಶ್ರೀಯುತ ಭಾರ್ತಿ ಪರಿಶೀಲಿಸುತ್ತಾರೆ

ಶ್ರೀಯುತ ಭಾರ್ತಿಯವರು ಪ್ರೌಢಶಾಲೆಯಲ್ಲಿ ಶಾಲಾ ನಾಯಕರಾಗಿ 5 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ನಾಲ್ಕು ಹೆಣ್ಣುಮಕ್ಕಳ ತಂದೆಯಾದ ಇವರಿಗೆ ಹೆಣ್ಣು ಮಕ್ಕಳು ಶಾಲೆ ಬಿಡುತ್ತಿರುವುದ ಕುರಿತು ಚಿಂತೆಯಾಗಿತ್ತು. ಒಂದು ವೇಳೆ, ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಅವರಿಗಿರುವ ಕಾಳಜಿ ಅವರ ನಿರೀಕ್ಷೆಯಷ್ಟು ಪರಿಣಾಮಕಾರಿಯಾಗಿರಲಿಲ್ಲ. ವರ್ಷಕಳೆದಂತೆಲ್ಲಾ ವಿದ್ಯಾರ್ಥಿನಿಯರ ಸಾಧನೆ ವಿದ್ಯಾರ್ಥಿಗಳ ಸಾಧನೆಗಿಂತ ಉತ್ತಮವಾಗಿದ್ದು, ಹತ್ತನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ವಿದ್ಯಾರ್ಥಿನಿಯರು ಕೇವಲ ಶೇ 20% ರಷ್ಟಿದ್ದರು.

ಶ್ರಿಯುತ ಭಾರ್ತಿಯವರು ಇಂಗ್ಲೀಷ್ ಶಿಕ್ಷಕರಾಗಿದ್ದು, ಗಣಿತದಲ್ಲಿ ಅಷ್ಟೇನು ಪರಿಣತಿಹೊಂದಿರದ ಕಾರಣ ಅವರು ಗಣಿತ ಶಿಕ್ಷಕರನ್ನು ವ್ಯವಸ್ಥಿತವಾಗಿ ದತ್ತಾಂಶವನ್ನು ಮರುಪರಿಶೀಲಿಸಲು ಸಹಾಯ ಕೋರಿದರು. ಅವರು ಗಣಿತ ಶಿಕ್ಷಕರಲ್ಲಿ ಕಳೆದ ಎರಡು ವರ್ಷಗಳಲ್ಲಿ, ಗಣಿತದಲ್ಲಿ ಹಿಂದುಳಿದ ಕಾರಣಕ್ಕಾಗಿ ಎಷ್ಟು ಹೆಣ್ಣು ಮಕ್ಕಳು 8ನೇ ತರಗತಿಗೆ ಶಾಲೆ ಬಿಟ್ಟಿದ್ದಾರೆ ಎಂಬ ವಿವರವನ್ನು ಕೇಳಿದರು, ಇದರಿಂದ ಅವರು ಶಾಲೆಯಲ್ಲಿ ಮುಂದುವರೆದಿದ್ದರೆ ಎಷ್ಟರ ಮಟ್ಟಿಗೆ ಸಾಧನೆ ಮಾಡಬಹುದಿತ್ತು ಎಂಬುದನ್ನು ಊಹಿಸುವ ಸಲುವಾಗಿ ಈ ವಿವರ ಕೇಳಿದರು. ಅವರು ಗಣಿತ ಶಿಕ್ಷಕರಿಂದ ಪಡೆದ ಈ ವಿವರವನ್ನು ಪರಿಶೀಲಿಸಿದಾಗ ಕಂಡು ಬಂದ ವಿಚಾರವೆಂದರೆ, 10 ಜನ ವಿದ್ಯಾರ್ಥಿನಿಯರು ಗಣಿತದಲ್ಲಿ ಮೊದಲ ನಾಲ್ಕು ಸ್ಥಾನ ಪಡೆದಿದ್ದರೆ ಕೇವಲ ಇಬ್ಬರು ವಿದ್ಯಾರ್ಥಿನಿಯರ ಸಾಧನೆ ಸಾಧಾರಣವಾಗಿತ್ತು.

ಇದೇ ಸಂಧರ್ಭದಲ್ಲಿ, ಶಾಲೆ ಬಿಟ್ಟ 10 ವಿದ್ಯಾರ್ಥಿನಿಯರಲ್ಲಿ 8 ಜನರು ಒಂದೇ ಹಳ್ಳಿಯಿಂದ ಬರುತ್ತಿದ್ದರು ಎಂಬುದನ್ನು ಗಮನಿಸಿದರು. ಈ ಮಕ್ಕಳ ತಂದೆ ತಾಯಿಯರನ್ನು ತೊಡಗಿಸಿಕೊಳ್ಳದ ಹೊರತು ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲವೆಂದು ನಿರ್ಧರಿಸಿದರು. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸಲು ಮತ್ತು ಈ ಅಸಮಾನತೆಯನ್ನು ಹೋಗಲಾಡಿಸಲು ಈ ಸಮಸ್ಯೆಗೆ ಕಾರಣಗಳನ್ನು ಹುಡುಕಲು ನಿರ್ಧರಿಸಿದರು. ಈ ನಿಟ್ಟಿನಲ್ಲಿ ಅವರು ಹೆಚ್ಚಿನ ಸಂಖ್ಯೆಯಲ್ಲಿ ಅವರ ವಿದ್ಯಾರ್ಥಿಗಳ ಮೇಲೆ ಗಂಭೀರ ಪರಿಣಾಮ ಬೀರುತ್ತಿರುವ ಕಾರಣಗಳನ್ನು ತಿಳಿದಿಕೊಂಡು ಆ ಸಂಬಂಧ ಮಾಹಿತಿಗಳನ್ನು ಕಲೆಹಾಕಿದರು. ಇದರ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ನಿರ್ಧರಿಸಿದರು.

## ಚಟುವಟಿಕೆ 8: ಶಾಲೆ ಬಿಟ್ಟ ವಿದ್ಯಾರ್ಥಿಗಳ ಪ್ರಮಾಣದ ಕುರಿತು ಪರಿಶೀಲನೆ

ಶ್ರೀಯುತ ಭಾರ್ತಿಯವರು ಎದುರಿಸಬಹುದಾದ ಸವಾಲುಗಳು ಮತ್ತು ಬಾಧಿತ ವಿದ್ಯಾರ್ಥಿನಿಯರಿಗೆ ಸಹಕಾರಿಯಾಗಿ ಉತ್ತಮ ಫಲಿತಾಂಶ ನೀಡಬಲ್ಲ ಯಾವ ಮಾರ್ಗಗಳನ್ನು ಅನುಸರಿಸಿದರು ಎಂಬುದರ ಕುರಿತು ನಿಮ್ಮ ಕಲಿಕಾ ದಿನಚರಿಯಲ್ಲಿ ಟಿಪ್ಪಣಿ ಬರೆದುಕೊಳ್ಳಿ.

**ಚರ್ಚೆ**

ಶಾಲಾ ನಾಯಕರಾಗಿ, ಶಿಕ್ಷಕರ ಬೋಧನಾ ಸಾಮರ್ಥ್ಯ, ಮಕ್ಕಳ ಕಲಿಕೆ ಮತ್ತು ಆಡಳಿತ ನಡೆಸುವುದಕ್ಕೆ ಮಾತ್ರ ನಿಮ್ಮ ಕರ್ತವ್ಯ ಮೀಸಲಾಗಿರುವುದಿಲ್ಲ ಎಂಬುದು ನಿಮ್ಮ ನೆನಪಿನಲ್ಲಿರಲಿ. ಶ್ರೀಯುತ ಭಾರ್ತಿಯವರು ಮಾಡಿದ ಕೆಲಸ ಪ್ರಶಂಸನೀಯ, ಏಕೆಂದರೆ ಇವರು ಶಾಲೆ ಬಿಟ್ಟ ವಿದ್ಯಾರ್ಥಿನಿಯರ ಬಗ್ಗೆ ಹೆಚ್ಚಿನ ಶಾಲೆಗಳು ಎದುರಿಸುತ್ತಿರುವ ಮೂಲ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದರು. ಅತೀ ಮುಖ್ಯವಾದ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಇವರು ಸಾರ್ವಜನಿಕ ವಲಯದಲ್ಲಿನ ದತಾಂಶಗಳನ್ನು ಬಳಸಿಕೊಂಡರು. ಹತ್ತನೇ ತರಗತಿಯಲ್ಲಿ ವಿದ್ಯಾರ್ಥಿನಿಯರ ಸಾಧನೆ ಉತ್ತಮವಾಗಿದ್ದ ಪಕ್ಷದಲ್ಲಿ, ಈ ಸಾಧನೆಯನ್ನು ಇನ್ನೂ ಉತ್ತಮ ಪಡಿಸಲು, 8ನೇ ತರಗತಿಯ ನಂತರವೂ ಅವರನ್ನು ಶಾಲೆಯಲ್ಲಿಯೇ ಉಳಿಸಿಕೊಳ್ಳುವುದು ಹೇಗೆ? – ಭಾರ್ತಿಯವರ ಸಣ್ಣ ತಂಡಕ್ಕೆ ಈ ಪ್ರಶ್ನೆಯನ್ನು ಕೇಂದ್ರೀಕರಿಸಿ, ದಾಖಲಾತಿ ಮತ್ತು ಸಾಧನೆಯನ್ನು ಉತ್ತಮಪಡಿಸಲು ಹಲವಾರು ಮಾರ್ಗಗಳನ್ನು ಕಂಡುಕೊಳ್ಳುವಂತೆ ಮಾಡಿತ್ತು. ಸಿಬ್ಬಂದಿಗಳು ಪೋಷಕರನ್ನು ತಲುಪಲು ನಿರ್ಧರಿಸಿದರು, ಅವರು ಪೋಷಕರೊಂದಿಗೆ ಚರ್ಚಿಸಿ, ಅವರ ಹೆಣ್ಣು ಮಕ್ಕಳನ್ನು ಶಾಲೆಯಲ್ಲಿ ಮುಂದುವರೆಯುವಂತೆ ಮಾಡುವಲ್ಲಿ ಅವರ ಸಮಸ್ಯೆಗಳನ್ನು ಅರಿತು, ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿದರು. ಅವರು ಮತ್ತು ಅವರ ತಂಡದವರು ಪೋಷಕರೊಂದಿಗೆ ಅವರ ಮಕ್ಕಳ ಶಿಕ್ಷಣದ ಯಶಸ್ಸಿನಲ್ಲಿ ಪಾಲುದಾರರಾಗಿ, ಶಾಲೆಯಿಂದಾಚೆಯೂ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ನಿರ್ಧರಿಸಿದರು.

ಪೋಷಕರೊಂದಿಗಿನ ಚರ್ಚೆಯಲ್ಲಿ ಎದುರಿಸಬೇಕಾಗಬಹುದಾದ ಕೆಲವು ಸಮಸ್ಯೆಗಳಿಗೆ ಕಾರಣ;

- ತಮ್ಮನ್ನು ಶಿಕ್ಷಿಸಬಹುದೇನೋ ಎಂಬ ಶಂಕೆ
- ಅವರ ನಂಬಿಕೆಗಳನ್ನು ಟೀಕಿಸುತ್ತಿದ್ದೇವೆಯೋ ಎಂಬ ಶಂಕೆ
- ಆರ್ಥಿಕವಾಗಿ ಯಾವುದೇ ಪರ್ಯಾಯ ವ್ಯವಸ್ಥೆ ಇಲ್ಲವೇನೋ ಎಂಬ ಭಾವನೆ.

ಶಾಲೆಗೆ ಬರುವಲ್ಲಿ ಮತ್ತು ಶಾಲೆಯಲ್ಲಿನ ಸುರಕ್ಷತೆಯ ಸಮಸ್ಯೆಗಳೇ ಮೊದಲಾಗಿ ಕೆಲವು ವಾಸ್ತವತೆಗಳನ್ನು ಬಿಚ್ಚಿಡಲಾಗಿದೆ, ಆದರೆ, ಈ ಶಾಲಾ ನಾಯಕರು ಶಾಲೆ ಬಿಟ್ಟ ಹೆಣ್ಣುಮಕ್ಕಳ ಪೋಷಕರನ್ನು ಭೇಟಿ ಮಾಡಿ, ಅವರ ಮಕ್ಕಳನ್ನು ಶಾಲೆಯಲ್ಲಿ ಮುಂದುವರೆಸಲು ಪ್ರೇರೇಪಿಸಿದ್ದು ತುಂಬಾ ಆಸಕ್ತಿದಾಯಕವಾಗಿದೆ. ಮುಂದಿನ ದಿನಗಳಲ್ಲಿ, ವಿದ್ಯಾರ್ಥಿನಿಯರು 8ನೇ ತರಗತಿಯಲ್ಲಿ ಕಲಿಯುತ್ತಿರುವಾಗಲೇ ಪ್ರತಿಯೊಂದು ಟರ್ಮಿನಲ್ಲೂ ಅವರ ಮನೆಗೆ ಭೇಟಿ ನೀಡಿ, ಅವರ ನಿರಂತರ ಹಾಜರಾತಿ ಮತ್ತು ಮುಂದುವರಿಕೆಯನ್ನು ಪ್ರೇರೇಪಿಸುವುದು ಮುಖ್ಯ ಎಂದು ಶ್ರೀಯುತ ಭಾರ್ತಿ ನಿರ್ಧರಿಸಿದರು.

ನಿಮ್ಮ ಶಾಲೆಯ ಯಶಸ್ಸಿಗೆ ಪೋಷಕರು ನಿಮ್ಮೊಂದಿಗೆ ಕೈಜೋಡಿಸಬೇಕೆಂದು ನೀವು ಬಯಸಿದಲ್ಲಿ, ನೀವು ಅವರೊಂದಿಗೆ ನಿರಂತರ ಸಂವಹನ ಮತ್ತು ಅವರು ನಿಮ್ಮೊಂದಿಗೆ ಸಂಭಾಷಿಸಲು ಮುಕ್ತ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಇದು ಸಭೆಗಳು, ಶಾಲೆಯ ಗೇಟಿನಲ್ಲಿ ಅನೌಪಚಾರಿಕ ಮಾತುಕತೆ ಅಥವಾ ನಿರ್ದಿಷ್ಟ ವಿದ್ಯಾರ್ಥಿಗಳ ಕುರಿತು ಚರ್ಚಿಸಬೇಕಾದಲ್ಲಿ ವೈಯಕ್ತಿಕ ಚರ್ಚೆಗಳನ್ನು ನಡೆಸುವುದರ ಮೂಲಕ ಸಾಧ್ಯವಾಗುತ್ತದೆ.

ಒಮ್ಮೆ ನೀವು ಈ ಬಗೆಯ ಮುಕ್ತ ಸಂವಹನ ನಡೆಸಿದಲ್ಲಿ, ಮುಂದಿನ ವ್ಯಕ್ತಿ ಅಧ್ಯಯನದಲ್ಲಿ ಶ್ರೀಮತಿ ಚಂದ್ರ ಮಾಡಿದಂತೆ ನೀವೂ ಸಹ ಅವರೊಂದಿಗೆ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳಬಹುದು.

## ವ್ಯಕ್ತಿ ಅಧ್ಯಯನ 4: ಶ್ರೀಮತಿ ಚಂದ್ರರವರಿಂದ – ಸುರಕ್ಷತೆಗೆ ಪರಿಹಾರ

ಶ್ರೀಮತಿ ಚಂದ್ರ ಅವರ ಶಾಲೆ ಹಲವು ದಿನಗಳಿಂದ ಯಾವುದೇ ದುರಸ್ಥಿ ಅಥವಾ ನಿರ್ವಹಣೆಯನ್ನು ಕಂಡಿರಲಿಲ್ಲ. ಇತ್ತೀಚೆಗೆ ಶಾಲೆಯ ಕಾಂಪೌಂಡ್ ಮುರಿದು ಬಿದ್ದು ಇಡೀ ಶಾಲಾ ಕಟ್ಟಡಕ್ಕೆ ಸುರಕ್ಷತೆ ಇಲ್ಲದಂತಾಗಿತ್ತು. ಅವರ ಶಾಲೆಯು ಒಂದು ಬಡಜನರಿರುವ ಸ್ಥಳದಲ್ಲಿದ್ದರೂ ಸಹ, ಇವರಿಗೆ ಪೋಷಕರ ಮತ್ತು ವಿದ್ಯಾರ್ಥಿಗಳ ಬೆಂಬಲದಿಂದ ಇವರಿಗೆ ಶಾಲೆಗೆ ತಪ್ಪದೇ ಹೋಗಲು ಸಂತೋಷ ನೀಡುತ್ತಿತ್ತು. ಒಮ್ಮೆ ಒಂದು ಪೋಷಕರ ಸಭೆಯಲ್ಲಿ, ಈಕೆ ಶಾಲಾ ಕಾಂಪೌಂಡ್‌ನ ದುಃಸ್ಥಿತಿಯನ್ನು ವಿವರಿಸಿದಾಗ, ಈ ಶಾಲೆಯಲ್ಲಿಯೇ ಕಲಿಯುತ್ತಿದ್ದ ವಿದ್ಯಾರ್ಥಿಗಳ ತಂದೆಯರು, ಇವರು ಅಣ್ಣ ತಮ್ಮಂದಿರೂ ಆಗಿದ್ದರು, ಕಾಂಪೌಂಡ್ ಗೋಡೆಯನ್ನು ರಿಪೇರಿ ಮಾಡಿಸಲು ಜನರನ್ನು ಒದಗಿಸುವುದಾಗಿ ತಿಳಿಸಿದರು. ಅವರು ಈ ಕಾರ್ಯದಲ್ಲಿ ಕೆಲವು ಹಿರಿಯ ವಿದ್ಯಾರ್ಥಿಗಳನ್ನೂ ಸಹ ತೊಡಗಿಸಿಕೊಳ್ಳುವಂತೆ ಸಲಹೆ ನೀಡಿದರು. ಈ ಕಾರ್ಯದ ಬಗ್ಗೆ ಚರ್ಚಿಸುತ್ತಿರುವಾಗಲೇ, ಹಣಕಾಸು, ವಸ್ತುಗಳ ಸಂಗ್ರಹಣೆ ನಡೆಸಲಾಗಿತ್ತು, ಹಾಗೂ ಈ ಸಹೋದರರು ಒಟ್ಟಾಗಿ ಸೇರಿ, ಇತರೆ ವಿದ್ಯಾರ್ಥಿಗಳ ತಂದೆಯರು, ಚಿಕ್ಕಪ್ಪ, ದೊಡ್ಡಪ್ಪ ಮತ್ತು ಮಾವಂದಿರೂ ಸೇರಿದಂತೆ ರಾತ್ರಿಯ ಹೊತ್ತು ಶಾಲೆಗೆ ಕಾವಲಿರುವ ಜವಾಬ್ದಾರಿ ತೆಗೆದುಕೊಂಡರು.

ಈ ಶಾಲೆಗೆ ಆಗಮಿಸಿದ ದಿನದಿಂದ ಶ್ರೀಮತಿ ಚಂದ್ರರವರು ಪೋಷಕರೊಂದಿಗೆ ಬಹಳ ಒಳ್ಳೆಯ ದಿನಗಳನ್ನು ಕಳೆದರು, ಅವರಲ್ಲಿ ಶಾಲೆ ತಮ್ಮದೇ ಮತ್ತು

ತಮ್ಮ ಮಕ್ಕಳ ಯಶಸ್ಸು ತಮ್ಮನ್ನೇ ಅವಲಂಭಿಸಿದೆ ಎಂಬ ಭಾವನೆ ಮೂಡಿಸಿದ್ದರು. ಪೋಷಕರಲ್ಲಿ ಶಾಲೆಯ ಬಗೆಗೆ ಹೆಮ್ಮೆಯ ಭಾವನೆ ಮೂಡಲು ಪ್ರೇರೇಪಿಸಿದ್ದರು. ಅವರ ವಿದ್ಯಾರ್ಥಿಗಳ ಪೋಷಕರೊಂದಿಗೆ ಈ ಬಗೆಯ ಪರಸ್ಪರ ಗೌರವಾನ್ವಿತ ಸಂಬಂಧ ಉತ್ತಮ ಫಲಿತಾಂಶ ನೀಡುವುದೆಂದು ಭರವಸೆ ಹೊಂದಿದರು.

## ಚಟುವಟಿಕೆ 9: ತಂದೆ ತಾಯಿಯರನ್ನು ತೊಡಗಿಸಿಕೊಳ್ಳಲು ಒಂದು ಯೋಜನೆಯನ್ನು ರಚಿಸಿ

ಚಟುವಟಿಕೆ 7 ರಲ್ಲಿ ನೀವು ಮಾಡಿದ ಪರಿಶೀಲನೆ ಬಗ್ಗೆ ಪುನರ್ ವಿಚಾರ ಮಾಡಿ. ಪೋಷಕರನ್ನು ತೊಡಗಿಸಿಕೊಳ್ಳುವಲ್ಲಿ ಯಾವ ಪ್ರಗತಿಯಾಗಿದೆ ಎಂದು ನೋಡಿ, ನಿಮ್ಮ ಪ್ರಭಾರಿ ಶಿಕ್ಷಕರ ಜೊತೆಗೂಡಿ ಮುಂದಿನ ಅವಧಿಯಲ್ಲಿ ಹಾಗೂ ಧೀರ್ಘಕಾಲಿಕ ಅವಧಿಯಲ್ಲಿ ಏನು ಮಾಡಬಹುದೆಂಬುದನ್ನು ನಿಮ್ಮ ದಿನಚರಿಯಲ್ಲಿ ಬರೆಯಿರಿ.

ತಂದೆ ತಾಯಿಯರು ಹಾಗೂ ಪೋಷಕರು ಶಾಲೆಯಲ್ಲಿ ಸುಲಭವಾಗಿ ತೊಡಗಿ ಕೊಳ್ಳುವಂತೆ ಮಾಡಲಾಗುವ ಕೆಲವು ಗುರಿಗಳನ್ನು ಪಟ್ಟಿಮಾಡಿ. ಒಂದೊಂದು ಗುರಿಯಿಂದಲೂ ಶಾಲೆಗೆ ಹಾಗೂ ವಿದ್ಯಾರ್ಥಿಯ ಕಲಿಕೆಗೆ ಆಗುವಂಥಹ ಪ್ರಯೋಜನಗಳನ್ನು ಗುರುತಿಸಿ.

**ಚರ್ಚೆ**

ನೀವು ಈಗಾಗಲೇ ಪೋಷಕರನ್ನು ಶಾಲೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಿರಬಹುದು – ಆದರೆ, ಈ ನಿಟ್ಟಿನಲ್ಲಿ ನೀವೂ ಇನ್ನೂ ಹೆಚ್ಚಿನ ಕೆಲಸಗಳನ್ನು ಮಾಡಬಹುದು. ಉದಾ:

- ಮನೆ ಪಾಠದ ಕುರಿತು ಚರ್ಚೆ.
- ತಮ್ಮ ತಂದೆತಾಯಿಯರ ಅಭಿಪ್ರಾಯಗಳನ್ನು ತಿಳಿಯಲು ವಿದ್ಯಾರ್ಥಿಗಳ ಮೂಲಕ ಸಮೀಕ್ಷೆಗಳನ್ನು ಕೈಗೊಳ್ಳುವುದು – ವಿದ್ಯಾರ್ಥಿಗಳ ಸಾಧನೆಯ ಬಗೆಗೆ ಮನೆ ಮನೆಗೂ ಪೋಸ್ಟ್ ಕಾರ್ಡ್ ಕಳುಹಿಸುವುದು.
- ನಿರ್ದಿಷ್ಟ ಶಿಕ್ಷಕರು ಹಾಗೂ ತಂದೆ ತಾಯಿಗಳ ನಡುವೆ ಚರ್ಚೆಗಳನ್ನು ನಡೆಸಲು ಶಾಲೆಯ ಸಮಯದ ನಂತರ ಮುಕ್ತ ವಾತಾವರಣವನ್ನು ನಿರ್ಮಿಸುವುದು.

ನೀವು ಏಕಕಾಲದಲ್ಲಿ ಈ ಎಲ್ಲಾ ಕಾರ್ಯಗಳನ್ನೂ ನಿರ್ವಹಿಸುವ ಅಗತ್ಯವಿಲ್ಲ. ಒಮ್ಮೆ ನೀವು ಈ ಚರ್ಚೆಗಳನ್ನು ಆರಂಭಿಸಿದಾಗ, ಹೆಚ್ಚಿನ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ. ಈ ಜಂಟಿ ಕಾರ್ಯದಿಂದ ನಿಮ್ಮ ವಿದ್ಯಾರ್ಥಿಗಳಿಗೆ ನೇರವಾಗಿ ಪ್ರಯೋಜನವಾಗುತ್ತದೆ.

ನಿಮ್ಮ ಶಾಲೆಯಲ್ಲಿ ಪೋಷಕರನ್ನು ತೊಡಗಿಸಿಕೊಳ್ಳುವುದು ಅವರ ಬಲವರ್ಧನೆಯನ್ನು ಒಳಗೊಂಡಿರುತ್ತದೆ, ಆದ್ದರಿಂದ ಅವರು ಅರಿವು ಮತ್ತು ಮಾಹಿತಿಯನ್ನು ಪಡೆಯುತ್ತಾರೆ. ಇದರಿಂದ, ಹೆಚ್ಚು ಕೊಡುಗೆಗಳನ್ನು ನೀಡಿ, ಶಾಲೆಯ ಕಾಣ್ಕೆ ಹಾಗೂ ಗುರಿಗಳನ್ನು ತಲುಪಲು ಸಾಧ್ಯವಾಗುತ್ತದೆ. ಇದು, ಪೋಷಕರನ್ನು ಎಸ್.ಎಂ.ಸಿ ಅಥವಾ ಪೋಷಕ–ಶಿಕ್ಷಕ ಸಂಘಟನೆಯ ಪರಿಣಾಮಕಾರಿ ಪ್ರತಿನಿಧಿಗಳನ್ನಾಗಿಸಲು ಸಹಾಯವಾಗಿದೆ. ಪೋಷಕರಿಗೆ ತಮ್ಮ ಮಗುವನ್ನಷ್ಟೇ ಅಲ್ಲದೇ ಸಮಗ್ರ ಶಾಲೆಯ ಅಭಿವೃದ್ಧಿಯ ಕುರಿತು ಗಮನಹರಿಸುವುದು ಕಷ್ಟಕರವೆನಿಸಬಹುದು, ಆದರೆ, ಅವರು ಪೋಷಕರಾಗಿ ಪ್ರತಿನಿಧಿಸುವ ಪಾತ್ರಗಳಲ್ಲಿ, ಅವರನ್ನಷ್ಟೇ ತೊಡಗಿಸಿಕೊಳ್ಳದೇ ಇತರರಿಗೂ ಪ್ರೇರೇಪಿಸುವುದು.

## ಚಟುವಟಿಕೆ 10: ಪೋಷಕರನ್ನು ಪ್ರತಿನಿಧಿಗಳಾಗಲು ಅನುವುಮಾಡಿಕೊಡುವುದು

ಸಮುದಾಯದ ಇತರೆ ಪೋಷಕರ ಪರವಾಗಿ ದನಿ ಎತ್ತಲು ಪೋಷಕರನ್ನು ಹೇಗೆ ತಮ್ಮ ಪಾತ್ರವನ್ನು ನಿರ್ವಹಿಸಬೇಕು ಎಂಬುದಕ್ಕೆ ಅವಕಾಶ ನೀಡುವುದ ಹೇಗೆಂಬುದರ ಕುರಿತು ನಿಮ್ಮ ಕಲಿಕಾ ದಿನಚರಿಯಲ್ಲಿ ದಾಖಲಿಸಿ. ನಿಮ್ಮ ಶಾಲೆಯ ಪೋಷಕರಲ್ಲಿ, ಅವರ ಸಮುದಾಯದಲ್ಲಿ ಗೌರವಿಸಲ್ಪಡುವಂಥಹ ಹಾಗೂ ನೇತೃತ್ವ ನಿರ್ವಹಿಸುವಂಥಹ ಪೋಷಕರನ್ನು ಗುರುತಿಸಿ ಇವರು ಸಹಜವಾಗಿಯೇ ಈ ಜವಾಬ್ದಾರಿಯನ್ನು ಹೊತ್ತು ಸಮರ್ಪಕವಾಗಿ ನಿರ್ವಹಿಸಬಲ್ಲರು. ಇಲ್ಲಿ ಮಾತನಾಡ ಬಯಸುವ ಇತರೆ ಪೋಷಕರು ಇದ್ದಾರೆಯೇ?. ಇವರು ಬೇರೆ ಪೋಷಕರ ಪರವಾಗಿ ಅಭಿಪ್ರಾಯ ಮಂಡಿಸುವ ಪ್ರತಿನಿಧಿಗಳೇ ಆಗಿರಬೇಕೆಂದಿಲ್ಲ. ಪೋಷಕರ ಪ್ರತಿನಿಧಿಗಳಿಗೆ ಕೊಡಲು ಇಚ್ಛಿಸುವ 6 ಮಾರ್ಗದರ್ಶಿ ತತ್ವಗಳನ್ನು ರಚಿಸಿ.

**ಚರ್ಚೆ**

ಪೋಷಕರಿಂದ ಮಾಡಿಸಲು ಬಯಸದ ಕೆಲವು ಕೆಲಸಗಳ ಬಗ್ಗೆ ನೀವು ಯೋಚಿಸಿರಬಹುದು (ಉದಾ: ಶಿಕ್ಷಕರ ಕುರಿತು ವೈಯಕ್ತಿಕ ಹೇಳಿಕೆಗಳು) ಅಥವಾ ಗೌಪ್ಯತೆಯನ್ನು ಕಾಪಾಡುವುದು ಅಥವಾ ಶಾಲಾ ಜೀವನದ ಬಗ್ಗೆ ಒಂದು ಸಂಪೂರ್ಣ ನೋಟ. ಶಾಲೆಯನ್ನು ಮುನ್ನಡೆಸುವಲ್ಲಿ, ಇತರೆ ಪೋಷಕರೊಂದಿಗೆ ಉತ್ತಮ ಸಂಪರ್ಕಹೊಂದಿರುವ ಹಾಗೂ ಮಕ್ಕಳ ಕಲಿಕೆಯ ಕುರಿತು ಮಾತನಾಡುವ ಪೋಷಕರು ಒಂದು ಆಸ್ತಿಯೆಂಬುದರಲ್ಲಿ ಸಂದೇಹವೇ ಇಲ್ಲ – ಕೇವಲ ಇತರೆ ಪೋಷಕರಿಗೆ ಮಾಹಿತಿಯನ್ನು ನೀಡುವುದಷ್ಟೇ ಅಲ್ಲದೇ, ಅವರ ಸಲಹೆಗಳನ್ನು ಶಾಲೆಗೆ ತಲುಪಿಸುವ ಕಾರ್ಯ ಸಹ ಮಾಡುತ್ತಾರೆ. ಇವರು ಇತರೆ ಪೋಷಕರೂ ಸಹ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಂತೆ ಸುಗಮಗಾರಿಕೆಯನ್ನೂ ನಡೆಸ ಬಲ್ಲರು. ಆದರೆ, ಇದು ಎಲ್ಲಾ ಪೋಷಕರೂ ಅವಶ್ಯಕವಾಗಿ ಹೊಂದಿರಲೇ ಬೇಕಾದ ಕೌಶಲವಲ್ಲ, ಮತ್ತು ಈ ಜವಾಬ್ದಾರಿ ಹೊರಲು ಮುಂದಾದವರಿಗೆ ಇದು ಸೂಕ್ತವೆನಿಸದೆಯೂ ಇರಬಹುದು. ಶಾಲಾ ನಾಯಕರಾಗಿ ನೀವು ಬಹು–ವರ್ಗದ ಜನರು ಪ್ರತಿನಿಧಿಗಳಾಗಿ ಜವಾಬ್ದಾರಿ ನಿರ್ವಹಿಸುವಂತೆ ಮಾಡಬೇಕು ಮತ್ತು ಅವರ ಸ್ವ–ನಂಬಿಕೆ ಮತ್ತು ಕೌಶಲಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವಲ್ಲಿ ಅವರಿಗೆ ಬೆಂಬಲ ನೀಡುವುದು.

ನಿಮ್ಮ ಶಾಲೆಯಲ್ಲಿ ಇವರು ತೊಡಗಿಕೊಳ್ಳಬಹುದಾದ ಇನ್ನಿತರ ಯಾವುದೇ (ಅಥವಾ ಅತೀ ಮುಖ್ಯವಾದ, ಶಾಲಾಭಿವೃದ್ಧಿ ಯೋಜನೆ) ಅಂಶಗಳಿವೆಯೇ?

ನೀವು ಪೋಷಕರನ್ನು ಸಂಘಟಿಸಬೇಕು ಇದರಿಂದ ಅವರು ಅನೌಪಚಾರಿಕವಾಗಿ ಪರಸ್ಪರ ಸಹಕಾರ ನೀಡುವಂತಾಗುತ್ತದೆ. ಒಂದು ವೇಳೆ ಅವರು ಶಾಲೆಗೆ ಬಂದು ಶಿಕ್ಷರೊಂದಿಗೆ ಮಾತನಾಡಲು ಹಿಂಜರಿಕೆ ತೋರಿದಲ್ಲಿ, ಇತರೆ ಪೋಷಕರನ್ನು ಮಧ್ಯವರ್ತಿಗಳಾಗಿ ಅಥವಾ ಸ್ನೇಹಿತರಾಗಿ ಸಹಕರಿಸಲು ನೀವು ಪ್ರೋತ್ಸಾಹ ನೀಡಬೇಕು. (ವ್ಯಕ್ತಿ ಅಧ್ಯಯನ 5ನ್ನು ಗಮನಿಸಿ).

## ವ್ಯಕ್ತಿ ಅಧ್ಯಯನ 5: ಶ್ರೀಯುತ ಚೌಧರಿಯವರು ಪೋಷಕ ಸ್ನೇಹಿ ಯೋಜನೆಯನ್ನು ರಚಿಸಿರುವುದು.

ಇತ್ತೀಚೆಗೆ, ಪೋಷಕರು ಶಾಲೆಯತ್ತ ಬರುವ ಸಂಸ್ಕೃತಿ ಇಲ್ಲದ ಅಥವಾ ಶಾಲೆಯ ಪೋಷಕರೊಂದಿಗೆ ಮಾತನಾಡುವ ಪದ್ಧತಿಯಲ್ಲದಂಥಹ ಒಂದು ಸಣ್ಣ ಗ್ರಾಮೀಣ ಶಾಲೆಯೊಂದಕ್ಕೆ ಶ್ರೀಯುತ ಚೌಧರಿ ಶಾಲಾ ನಾಯಕರಾಗಿ ನೇಮಕಗೊಂಡರು. ಈ ದೊಡ್ಡ ಅಂತರ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯಲು ಕಾರಣವಾಗಿತ್ತು. ಇದರಿಂದ ಇವರು ಹಾಗು ಇತರೆ ಶಿಕ್ಷಕರು ಮಕ್ಕಳ ಕೌಟುಂಬಿಕ ಹಿನ್ನೆಲೆಯ ಕುರಿತು ತೀರಾ ಕನಿಷ್ಠ ಮಾಹಿತಿ ಹೊಂದುವಂತೆ ಮಾಡಿತ್ತು.

ಈತ ಪೋಷಕರೇ ನಡೆಸಬಹುದಾದ ಪೋಷಕರ ಸಲುವಾಗಿ ಒಂದು ಯೋಜನೆಯನ್ನು ನಿರ್ಧರಿಸಿದರು. ಈ ಪ್ರಯತ್ನದಿಂದ, ಸಂವಹನದಲ್ಲುಂಟಾಗಿರುವ ಅಂತರಕ್ಕೆ ಸೇತುವೆಯಾಗಿ ಮತ್ತು ಪೋಷಕರು ತಮ್ಮ ಕಾಳಜಿಗಳ ಕುರಿತು ಚರ್ಚಿಸಲು ಅವಕಾಶ ಕಲ್ಪಿಸಿಕೊಡಬಹುದೆಂಬ ಆಶಯ ಹೊಂದಿದ್ದರು.

ಇದರ ಕುರಿತು ಸ್ಥಳೀಯ ಸಮುದಾಯ ನಾಯಕರು ಹಾಗೂ ತನ್ನ ಸಹಶಿಕ್ಷಕರೊಡನೆ ಚರ್ಚಿಸಿದಾಗ, ಅವರು ಈ 'ಪೋಷಕ–ಸ್ನೇಹಿತರು' ಮಹಿಳೆಯರಾಗಿದ್ದಲ್ಲಿ ಒಳಿತು ಎಂಬ ನಿರ್ಧಾರ ಕೈಗೊಂಡರು ಹಾಗೂ ಆರಂಭದಲ್ಲಿ ಇವರು ಇತರೆ ತಾಯಂದಿರೊಂದಿಗೆ ಸಂಪರ್ಕಹೊಂದಿ ಅವರೊಡನೆ ಚರ್ಚೆ ಮತ್ತು ಸಭೆಗಳನ್ನು ನಡೆಸುವ ಮುಖಾಂತರ ಈ ಯೋಜನೆಯನ್ನು ಜಾರಿಗೊಳಿಸಲಾಯಿತು. ಶ್ರೀಯುತ ಚೌಧರಿಯವರು ಕೆಲವು ವಿದ್ಯಾರ್ಥಿಗಳ ಮೂಲಕ ಆಹ್ವಾನ ಪತ್ರಿಕೆ ಕಳಿಸಿ, ತಾಯಂದಿರನ್ನು ನಿಗದಿತ ದಿನಾಂಖದಂದು ಸಭೆ ಸೇರಿ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳ ಕುರಿತು ಚರ್ಚಿಸಲು ತಿಳಿಸಿದರು. ಕೇವಲ ಮೂರು ಜನ ತಾಯಂದಿರು ಮಾತ್ರವೇ ಸಭೆಗೆ ಹಾಜರಾದರು, ಆದರೆ, ಅವರೆಲ್ಲರೂ ಶ್ರೀ ಚೌಧರಿಯವರು ನಿಗದಿಪಡಿಸಿದ ಜವಾಬ್ದಾರಿಗಳನ್ನು ಹೊರಲು ಸಿದ್ಧರಿದ್ದರು ಮತ್ತು ಇದಕ್ಕಾಗಿ ಸಣ್ಣದೊಂದು ತರಬೇತಿ, ಪ್ರಮಾಣಪತ್ರ ಮತ್ತು ತಾವು ಹಾಕಿಕೊಳ್ಳಲು ಒಂದು ಬ್ಯಾಡ್ಜ್ ಅನ್ನೂ ನೀಡಲಾಗುವುದು ಎಂದು ತಿಳಿಸಿದಾಗ ಅವರಿಗೆ ಇನ್ನೂ ಹೆಚ್ಚಿನ ಸಂತೋಷವಾಗಿತ್ತು,

ಒಮ್ಮೆ ಈ ಯೋಜನೆಯು ಒಂದು ವರ್ಷಗಳ ಕಾಲ ನಡೆಸಿದ ನಂತರ, ಪುರುಷರನ್ನೂ ಪೋಷಕರ ಸ್ನೇಹಿತರನ್ನಾಗಿ ನೇಮಿಸಕೊಳ್ಳಬಹುದೆಂಬ ಸಲಹೆ ಬಂದಿತ್ತು. ಅದರಂತೆ ಚೌಧರಿಯವರು ತಂದೆಯಂದಿರ ಸಮೂಹದಿಂದ ಸ್ವಯಂ ಸೇವಕರನ್ನು ನೇಮಿಸಿಕೊಳ್ಳಲು ತೀರ್ಮಾನಿಸಿದರು.

ಶಾಲಾ ನಾಯಕರಾಗಿ, ನಿಮ್ಮ ವಿದ್ಯಾರ್ಥಿಗಳ ಪೋಷಕರೊಡನೆ ನೀವು ಉತ್ತಮ ಬಾಂಧವ್ಯ ಹೊಂದಿರಬಹುದು, ಅಥವಾ ಅವರು ಶಾಲೆಯಲ್ಲಿ ಏನು ನಡೆಯುತ್ತದೆ ಎಂಬುದನ್ನು ಚರ್ಚಿಸಲು ಈಗಾಗಲೇ ಒಂದು ವೇದಿಕೆಯನ್ನು ಹೊಂದಿರಬಹುದು. ಆದರೆ, ಈ ಸಂವಹನವನ್ನು ಉತ್ತೇಜಿಸಲು ಒಬ್ಬ ಶಾಲಾ ನಾಯಕರಾಗಿ ನೀವು ನಿರಂತರ ಬೆಂಬಲ ನೀಡಬೇಕಾಗುತ್ತದೆ. ಇದನ್ನು ನೀವು ನಿಮ್ಮ ಅಧಿಕಾರಕ್ಕೆ ಒಂದು ಧಕ್ಕೆ ಎಂದು ಭಾವಿಸಬಾರದು ಅಥವಾ ನೀವು

ಎದುರಿಸಬೇಕಾದ ಟೀಕೆ ಎಂದೂ ಎಣಿಸಬಾರದು. ಪೋಷಕರಿಂದ ಬರುವ ಹಿಮ್ಮಾಹಿತಿಯು ತಮ್ಮ ಮಕ್ಕಳ ಕಲಿಕೆಯ ಕುರಿತಾದ ಆಶಯದಿಂದ ಹೊರಹೊಮ್ಮಿದಂತದ್ದಾಗಿರುತ್ತದೆ.

### ಚಟುವಟಿಕೆ 11: ನಿಮ್ಮ ಪೋಷಕರಿಗೆ ಪರಸ್ಪರ ಸಂಘಟಿಸಲು ಹಾಗೂ ಬೆಂಬಲ ನೀಡಲು ಸಹಕರಿಸುವುದು

ಶಾಲೆಗೆ ಬರಲು ಆಸಕ್ತಿಯೇ ತೋರದ ಅಥವಾ ನಿಮ್ಮೊಂದಿಗೆ/ ಇತರೆ ಶಿಕ್ಷಕರೊಂದಿಗೆ ಮಾತನಾಡಲು ಬಯಸದ ಪೋಷಕರ ಬಗ್ಗೆ ಚಿಂತಿಸಿ. ಅವರು ಏಕೆ ತೊಡಗಿಕೊಳ್ಳುವುದಿಲ್ಲ ಮತ್ತು ಇತರೆ ಪೋಷಕರು ಅವರಿಗೆ ಆಸಕ್ತಿ ಮೂಡುವಂತೆ ಮಾಡಲು ಏನು ಮಾಡಬಹುದು? ಈ ಅಂತರವನ್ನು ಹೋಗಲಾಡಿಸಲು ನಿಮಗೆ ಇನ್ನಿತರೆ ಯಾವುದಾದರೂ ಪೋಷಕರಲ್ಲಿ ವಿಶ್ವಾಸವಿದೆಯೇ?

### ವ್ಯಕ್ತಿ ಅಧ್ಯಯನ 6: ಸೀಮಿತ ಸಾಕ್ಷರತೆಹೊಂದಿರುವ ಪೋಷಕರಿಗೆ ಸಹಾಯ ನೀಡುವ ಶ್ರೀಮತಿ ರಾವೂಲ್.

ಕೆಲವು ವರ್ಷಗಳ ಹಿಂದೆ ಶ್ರೀಮತಿ ರಾವೂಲ್ ಒಂದು ಪುಟ್ಟ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ನಾಯಕರಾಗಿದ್ದರು. ಅವರಿಗೆ ಪ್ರಾರಂಭದಲ್ಲೇ ಎದುರಿಸಬೇಕಾಗಿ ಬಂದ ಸಮಸ್ಯೆಯೇನೆಂದರೆ, 3ನೇ ಮತ್ತು 4ನೇ ತರಗತಿಯ ಮಕ್ಕಳ್ಯಾರೂ ಮನೆಪಾಠ ಮಾಡಿಕೊಂಡು ಬರುತ್ತಿರಲಿಲ್ಲ. ಶ್ರೀಮತಿ ರಾವೂಲ್, ಊರಿನೊಳಗೆ ಹೋಗಿ, ಕೆಲವು ತಾಯಂದಿರನ್ನು ಭೇಟಿ ಮಾಡಿ, ಮನೆಪಾಠ ಏಕೆ ಮುಖ್ಯ, ಅದು ಹೇಗೆ ಮಕ್ಕಳು ಅವರು ಕಲಿತ ವಿಚಾರಗಳ ಬಗ್ಗೆ ಓದಲು ಹಾಗೂ ಬರೆಯಲು ಸಹಕಾರಿಯಾಗುತ್ತದೆ ಎಂದು ವಿವರಿಸಿದರು. ಬಹುಶಃ ತಾಯಂದಿರು ಅವರ ಮಕ್ಕಳ ಮನೆಪಾಠಕ್ಕೆ ಸಹಾಯ ಮಾಡಬಹುದು ಎಂದು ಸಲಹೆ ನೀಡಿದರು. ಆದರೆ, ನಂತರ ಅವರಿಗೆ ತಿಳಿದದ್ದೇನೆಂದರೆ ತಾಯಂದಿರಲ್ಲಿ ಬಹಳ ಜನರಿಗೆ ಓದು ಬರಹ ಬರುತ್ತಿರಲಿಲ್ಲ. ಆದ ಕಾರಣ ಅವರಿಗೆ ಮಕ್ಕಳಿಗೆ ಸಹಾಯ ಮಾಡಲು ಸಾಧ್ಯವಾಗುತ್ತಿರಲಿಲ್ಲ.

ತಾಯಂದಿರಲ್ಲೊಬ್ಬರಾದ ನಿಶಾ, ಶ್ರೀಮತಿ ರಾವೂಲ್ ಅವರನ್ನು ಭೇಟಿ ಮಾಡಿ, ತಾಯಂದಿರಿಗಾಗಿ ಒಂದು ತರಗತಿ ಮಾಡಬಹುದೇ ಎಂದು ವಿಚಾರಿಸಿದರು ಮತ್ತು ಇತರೆ ತಾಯಂದಿರನ್ನು ಉತ್ತೇಜಿಸಲು ಅವರೊಂದಿಗೆ ಮಾತನಾಡುತ್ತೇನೆಂದು ಒಪ್ಪಿಕೊಂಡರು. ವಾರದಲ್ಲೊಮ್ಮೆ, ಶಾಲೆಯ ಅವಧಿಯ ನಂತರ ಒಂದು ಘಂಟೆ ಸಮಯ ತರಗತಿಗೆ ಬರಲು ಆರಂಭಿಸಿದರು. ತಾಯಂದಿರು, ಶ್ರೀಮತಿ ರಾವುಲ್ ಅವರ ತರಗತಿಯಲ್ಲಿರುವಾಗ ಮಕ್ಕಳು ಆಟದ ಮೈದಾನದಲ್ಲಿ ಆಟವನ್ನಾಡುತ್ತಾ ಶಾಲೆಯಲ್ಲಿಯೇ ಉಳಿದರು. ನಿಶಾ, ತಾಯಂದಿರಿಗೆ, ಪ್ರೋತ್ಸಾಹಿಸಿ ಶ್ರೀಮತಿ ರಾವೂಲ್ ನ ತರಗತಿಗೆ ಬರುವಂತೆ ಹಾಗೂ ನಿಶಾ ಅವರ ಪತಿ ಅವರ ಸ್ನೇಹಿತರ ಪತ್ನಿಯರಾದ ಇತರೆ ತಾಯಂದಿರಿಗೂ ಈ ತರಗತಿಗೆ ಬರುವಂತೆ ಪ್ರೋತ್ಸಾಹಿಸಿದರು. ತಾಯಂದಿರು ಬಹಳ ಬೇಗನೆ ತಮ್ಮ ಮಕ್ಕಳಿಗೆ ಮನೆಪಾಠದಲ್ಲಿ ಸಹಾಯ ಮಾಡು ವಿಶ್ವಾಸ ಹೊಂದಿದರು. ನಿಶಾ ಅವರ ನೆರೆಯಲ್ಲಿಯೇ ಒಂದು ರೀಡಿಂಗ್ ಕ್ಲಬ್ ಅನ್ನು ಸ್ಥಾಪಿಸಿ, ತಾಯಂದಿರಿಗೆ ಪರಸ್ಪರ ಸಹಾಯ ಮಾಡಲು ಹಾಗೂ ಒಟ್ಟಾಗಿ ಕಲಿಯಲು ಸಹಕರಿಸಿದರು.



ವಿರಾಮದಲ್ಲಿ ಒಂದು ಚಿಂತನೆ

- ನಿಮ್ಮ ಶಾಲೆಯಲ್ಲಿರುವ ಯಾವುದಾದರೂ ಪೋಷಕರು ಕೆಲವು ನಿರ್ದಿಷ್ಟ ಪೋಷಕರೊಂದಿಗೆ ಸಂಪರ್ಕ ಹೊಂದಬಲ್ಲರೇ – ಉದಾ: ಅವರು ಒಂದೇ ಹಳ್ಳಿಯವರು ಅಥವಾ ಒಂದೇ ಭಾಷೆಯನ್ನು ಮಾತನಾಡುವವರಾಗಿರಬಹುದು.
- ಆರಂಭದಲ್ಲಿ ನೀವು ಯಾವ ಪೋಷಕರನ್ನು ಸಂಧಿಸಬಹುದು ಹಾಗೂ ಅವರು ಏನು ಮಾಡಬೇಕೆಂಬುದನ್ನು ಅವರಿಗೆ ಹೇಗೆ ವಿವರಿಸುತ್ತೀರಿ?

# 5 ಘೋಷ್ವಾರೆ

ಯಾವುದೇ ಶಾಲೆಯು ಪ್ರತ್ಯೇಕವಾಗಿರುವುದಿಲ್ಲ. ಅವರು ಸ್ಥಳೀಯ ಜನರಿಗೆ ಸೇವೆಸಲ್ಲಿಸುವುದರ ಜೊತೆಗೆ ವಿಸ್ತಾರವಾದ ಸಮುದಾಯದೊಂದಿಗೆ ಚರ್ಚಿಸುತ್ತದೆ ಮತ್ತು ರಾಜ್ಯದ, ಜಿಲ್ಲೆಯ ಮತ್ತು ತಾಲ್ಲೂಕು ಮಟ್ಟದಲ್ಲಿನ ಶಿಸ್ತಿನ ಕಾರ್ಯಾಚರಣೆಗಳು ಮತ್ತು ತನ್ನ ಸಂಪರ್ಕಜಾಲದ ಪರಿಮಿತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ.. ತರಗತಿಯಲ್ಲಿನ ಬೋಧನಾ ಮತ್ತು ಕಲಿಕೆಯ ಮೇಲೆ ಸಕಾರಾತ್ಮಕ ಪರಿಣಾಮವನ್ನು ತರಲು ಸಹಯೋಗದ ಸಹಭಾಗಿತ್ವವನ್ನು ಹೊಂದಿ, ಈ ಸಹಭಾಗಿತ್ವವನ್ನು ಕಾಯ್ದುಕೊಳ್ಳಲು ಸಮವನ್ನು ನೀಡುವುದು ಶಾಳಾ ನಾಯಕರ ಜವಾಬ್ದಾರಿಯಾಗಿದೆ. ಯಾವುದೇ ಶಾಲೆಯ ಪ್ರತ್ಯೇಕವಾಗಿರುವುದಿಲ್ಲ ಎಂಬಂತೆ, ವಿದ್ಯಾರ್ಥಿಯ ಕಲಿಕೆಯೂ ಸಹ – ಇದು ಶಾಲೆಯಿಂದ ಹೊರಗುಳಿಯುವ ಅವರ ಜೀವನವನ್ನು ಒಳಹೊಕ್ಕಿರುತ್ತದೆ. ಪೋಷಕರು ಮತ್ತು ಅವರ ಸಮುದಾಯದರೊಂದಿಗಿನ ಭಾಗೀದಾರತ್ವದಿಂದ ವಿದ್ಯಾರ್ಥಿಯ ಕಲಿಕೆಯನ್ನು ಹೆಚ್ಚು ಅರ್ಥಪೂರ್ಣಗೊಳಿಸಬಹುದು.

ಶಾಲಾ ನಾಯಕರು ಸಂಪರ್ಕಜಾಲ ಮತ್ತು ಬಾಂಧವ್ಯಗಳನ್ನು ಹೊಂದುವುದು ತೀರಾ ಅಗತ್ಯ, ಆದುದರಿಂದ ಶಾಲೆಯ ಸ್ಥಳೀಯ ಸಂಪನ್ಮೂಲ ಮತ್ತು ಪರಿಣತಿಯನ್ನು ಸಮರ್ಪಕವಾಗಿ ಬಳಸಿಕೊಳ್ಳಬಹುದು. ಅಲ್ಲದೇ, ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಕಲಿಕೆಗೆ ಈ ಹಂಚಿಕೊಂಡ ಜವಾಬ್ದಾರಿಯಿಂದ ಸಾಕಷ್ಟು ಪ್ರಯೋಜನ ಪಡೆಯುತ್ತಾರೆ.

ಸಂಪನ್ಮೂಲಗಳು

# ಸಂಪನ್ಮೂಲ 1: ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ನಿಮ್ಮ ತೊಡಗಿಕೊಳ್ಳುವಿಕೆ

***ಕೋಷ್ಟಕ R1.1*** *ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ನಿಮ್ಮ ತೊಡಗಿಕೊಳ್ಳುವಿಕೆ.*

| ಸಂಸ್ಥೆಯ ಹೆಸರು | ನಿಯತವಾಗಿ ದ್ವಿಮುಖ–ಸಂಪರ್ಕ | ನಿಯತವಾಗಿ – ಒಮ್ಮುಖದ ಸಂಪರ್ಕ | ಯಾವಾಗಲಾದರೊಮ್ಮೆ ಸಂಪರ್ಕಿಸುತ್ತೇವೆ | ಸಂಪರ್ಕ ಇಲ್ಲ | ಯಾವ ವಿಚಾರಕ್ಕೆ ನೀವು ಅವರನ್ನು ಸಂಕರ್ಪಿಸಿದ್ದೀರಿ | ಅಲ್ಲಿ ನೀವು ಸಂಪರ್ಕಿಸುವ ಪ್ರಮುಖ ವ್ಯಕ್ತಿಯ ಹೆಸರು |
|---|---|---|---|---|---|---|
| ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಂ.ಎಸ್.ಎ) | | | | | | |
| ಸರ್ವ ಶಿಕ್ಷ ಅಭಿಯಾನ (ಎಸ್.ಎಸ್.ಎ) | | | | | | |
| ಶಿಕ್ಷಣ ಇಲಾಖೆ | | | | | | |
| ರಾಜ್ಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಮಂಡಳಿ (ಎಸ್.ಸಿ.ಇ.ಆರ್.ಟಿ) | | | | | | |
| ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) | | | | | | |
| ಜಿಲ್ಲಾ ಸಂಪನ್ಮೂಲ ಕೇಂದ್ರ (ಡಿ.ಆರ್.ಸಿ.) | | | | | | |
| ಕ್ಷೇತ್ರ ಸಂಪನ್ಮೂಲ ಕೇಂದ್ರ (ಬಿ.ಆರ್.ಸಿ) | | | | | | |
| ಕ್ಲಸ್ಟರ್ ಸಂಪನ್ಮೂಲ ಕೇಂದ್ರ (ಸಿ.ಆರ್.ಸಿ) | | | | | | |
| ಜಿಲ್ಲಾ ಪಂಚಾಯಿತಿ | | | | | | |

# ಸಂಪನ್ಮೂಲ 2: ಸಹಭಾಗಿತ್ವದ ವ್ಯಾಪ್ತೀಕರಣಕ್ಕೆ ನಮೂನೆ

***ಕೋಷ್ಟಕ ಆರ್ 2.1*** ಸಹಭಾಗಿತ್ವದ ವ್ಯಾಪ್ತೀಕರಣಕ್ಕೆ ನಮೂನೆ.

| **ಸೂಚನೆ** | **ಪ್ರತಿಕ್ರಿಯೆ** |
|---|---|
| ಈ ಸಹಭಾಗಿತ್ವದ ಗುರಿ ಏನು?<br>(ಎರಡೂ ಗುಂಪಿನವರಿಗೂ) | |
| ಈ ಸಹಭಾಗಿತ್ವದ ಅವಧಿ ಏನು?<br>(ಅಲ್ಪಾವಧಿ ಅಥವಾ ಧೀರ್ಘಾವಧಿ) | |
| ಅಪೇಕ್ಷಿತ ಫಲಿತಾಂಶಗಳೇನು? | |
| ಈ ಫಲಿತಾಂಶಗಳನ್ನು ಈಡೇರಿಸಲು ಯಾವ ಕ್ರಮಗಳನ್ನು ಕೈಗೊಳ್ಳುವಿರಿ? | |
| ಯಾವ ಸಂಪನ್ಮೂಲಗಳ ಅಗತ್ಯವಿದೆ?<br>(ಮಾನವ ಮತ್ತು ವಸ್ತು) | |
| ಇದಕ್ಕೆ ಲಭ್ಯವಿರುವ ಹಣಕಾಸು ಎಷ್ಟು?<br>(ಎಷ್ಟು ಲಭ್ಯವಿದೆ ಎಂದು ಯಾರು ತಿಳಿಸುತ್ತಾರೆ) | |
| ಈ ಸಹಭಾಗಿತ್ವವನ್ನು ಯಾವಾಗ ಮತ್ತು ಹೇಗೆ ನಿರ್ವಹಣೆ ಮತ್ತು ಮೌಲ್ಯಮಾಪನ ಮಾಡಲಾಗುವುದು? | |
| ಭಾಗೀದಾರರು ಮತ್ತು ಶಾಲಾ ಸಮುದಾಯದ ನಡುವಿನ ಸಂವಹನೆಯನ್ನು ಹೇಗೆ ನಿರ್ವಹಿಸಲಾಗುತ್ತದೆ? | |

# ಪೂರಕ ಆಕರಗಳು

- ಸ್ವಾಟ್ ವಿಶ್ಲೇಷಣೆ : http://www.businessballs.com/swotanalysisfreetemplate.htm
- ಶಾಲಾ ಪ್ರವಾಸದ ಕುರಿತು ಬ್ಲಾಗ್: http://www.shishuvan.com/wp/?p=1242
- *ಗುಣಾತ್ಮಕ ಒಳಗೊಳಿಸುವಿಕೆಯ ಶಿಕ್ಷಣ ಮತ್ತು ವಿಕೇಂದ್ರೀಕೃತ ಶಾಲಾ ಆಡಳಿತ, ಸೇವ್ ದಿ ಚಿಲ್ಡ್ರನ್ ನ ವರದಿ*: http://eruindia.org/files/school-management-09-04-13.pdf
- ಆರ್.ಟಿ.ಇ. ಕುರಿತು ಮಾಹಿತಿ: http://righttoeducation.in/know-your-rte
- *ಬದಲಾವಣೆಯ ಹರಿಕಾರರಾಗಿ ಜನರು*, ಆಕ್ಸ್‌ಫಾಂನ ಒಂದು ವರದಿ : http://preview.tinyurl.com/ksvptsp

# ಆಕರಗಳು/ಗ್ರಂಥಸೂಚಿ ಪುಸ್ತಕಗಳು


Banerjee, A.V., Banerji, R., Duflo, E., Glennerster, R. and Khemani, S. (2010) 'Pitfalls of participatory programs: evidence from a randomized evaluation in education in India', *American Economic Journal: Economic Policy*, vol. 2, no. 1, pp. 1–30. Available from: http://www.jstor.org/stable/25760049 (accessed 24 December 2014).

Gardner Chadwick, K. (2002) *Improving Schools through Community Engagement: A Practical Guide for Educators*. Thousand Oaks, CA: Corwin Press.

Mehta, R. (2014) 'Kuppam memories' (online), Shishuvan Blog, 24 February. Available from: http://www.shishuvan.com/wp/?p=1242 (accessed 24 December 2014).

National Council of Educational Research and Training (NCERT) (2005) *National Curriculum Framework 2005* (NCF). New Delhi: National Council of Educational Research and Training. Available from: http://www.teindia.nic.in/files/ncf-2005.pdf (accessed 19 December 2014).

The Scottish Government (2005) 'Forms and patterns of parental involvement', Chapter 4 in *Parents' Views on Improving Parental Involvement in Children's Education*. Available from: http://www.scotland.gov.uk/Publications/2005/03/20759/53614 (accessed 24 December 2014).

Sharma, R. and Ramachandran, V. (eds) (2009) *The Elementary Education System in India: Exploring Institutional Structures*. New Delhi: Routledge India.

Sreekanth, Y. (2010) 'Parents involvement in the education of their children: indicators of level of involvement', International Journal about Parents in Education, vol. 5, no. 1, pp. 36–45. Available from: http://www.ernape.net/ejournal/index.php/IJPE/article/viewFile/114/74 (accessed 24 December 2014).

Vellymalay, S.K.N. (2012) 'Bridging school and parents: parental involvement in their child's education', *Journal of Studies in Education*, vol. 2, no. 1, pp. 41–57. Available from: http://www.macrothink.org/journal/index.php/jse/article/download/1170/1061 (accessed 24 December 2014).


# ಕೃತಜ್ಞತೆಗಳು


This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.



Video (including video stills): thanks are extended to the teacher educators, headteachers, teachers and students across India who worked with The Open University in the productions.